# ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ
Chilume Circulated in and around 10 countries

ಸಂಪುಟ ೨, ಸಂಚಿಕೆ ೧೨, ಮೇ ೨೦೧೫


## ಕನ್ನಡವನ್ನು ಕಟ್ಟುವ ಕಾರ್ಮಿಕರಿಗೆ ಹರುಷದ ಹೊನಲಿರಲಿ



ಮುಖಪುಟ ರಚನೆ: ಸುಪ್ರಿಯ ಜಿ.ಆರ್


Find us on: facebook

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)


ಚಿಲುಮೆಯ ಒಳಗೆ


ಈಗಿನ ಸುದ್ದಿ ... ಪು. ೧
ಸಂಪಾದಕೀಯ ... ಪು. ೩
ನಗೆಗಡಲು – ಲೇಖನ ... ಪು. ೪


ಚಿಲುಮೆಯ ಒಳಗೆ


ಪದ ಪುಂಜ/ರಂಗೋಲಿ ... ಪು. ೧೬
ಕರ್ನಾಟಕ ರಾಜವಂಶಗಳು ... ಪು. ೧೭


ಚಿಲುಮೆಯ ಒಳಗೆ


ಆರೋಗ್ಯ ... ಪು. ೬
ವಿಚಾರ ವಿಹಾರ ... ಪು. ೯
ರಾಂ ರಾಮ! ಹಾಸ್ಯ ... ಪು. ೧೦


ಚಿಲುಮೆಯ ಒಳಗೆ


ವಿಜ್ಞಾನ ... ಪು. ೨೧
ಅಲ್ಲಲ್ಲಿ ಏನೇನು ... ಪು. ೨೧


ಚಿಲುಮೆಯ ಒಳಗೆ


ಕಥಾಚಿಲುಮೆ ... ಪು. ೧೩
ರೆಸಿಪಿ ಕೊಡ್ತೀರಾ! ... ಪು. ೧೩
ಕಾವ್ಯ ಚಿಲುಮೆ, ಹಾಸ್ಯ ಚಿಲುಮೆ ... ಪು. ೧೪


**ಒಂದು ಕನ್ನಡದ ಕಾಯಕಕ್ಕೆ ಮನವಿ**


ಪುಟ ೨೧

# ಸಿಡ್ನಿ ಯುಗಾದಿ ಹಬ್ಬದ ಆಚರಣೆಯ ಒಂದು ಕಿರು ನೋಟ

ಏಪ್ರಿಲ್ ಹದಿನೆಂಟನೆ ತಾರೀಕು ಸುಗಮ ಗಾನ ಸಮಾಜದವರು ಹಮ್ಮಿಕೊಂಡಿದ್ದ ಯುಗಾದಿ ಹಬ್ಬವು ಸಾಂಗೋಪಾಂಗವಾಗಿ ನಡೆಯಿತು. ಇದನ್ನು ನಡೆಸಿಕೊಟ್ಟ ಸುಗಮ ಗಾನ ಸಮಾಜಕ್ಕೆ ನಾವುಗಳು ಚಿರಋಣಿಯಾಗಿರಲೇ ಬೇಕು. ಕಾರ್ಯಕ್ರಮದ ವಿವರಗಳು ಅದನ್ನು ನೋಡಿ ಸಂತೋಷ ಪಟ್ಟ ಮನಗಳ ಪರವಾಗಿ ನನ್ನದೊಂದು ಪುಟ್ಟ ವರದಿ.

ಸಂಜೆ ಆರಕ್ಕೆ ಸರಿಯಾಗಿ wattle grove ಶಾಲೆಯ ಆವರಣದಲ್ಲಿ ಯುಗಾದಿಯ ಆಚರಣೆಯ ಅಂಗವಾಗಿ ಬೇಗ ಬಂದ ಸದಸ್ಯರು ಕುರ್ಚಿ ಮತ್ತು ಮೇಜುಗಳನ್ನೂ ಒಪ್ಪವಾಗಿ ಜೋಡಿಸ ತೊಡಗಿದರು. ವೇದಿಕೆಯ ಮೇಲೆ ಚಿಕ್ಕ ಮೇಜು ಅದರ ಮೇಲೆ ಇಟ್ಟ ಗಣೇಶನ ಪಟ ಮತ್ತು ದೀಪಗಳು ಯುಗಾದಿಯ ಕಾರ್ಯಕ್ರಮ ಎಂದಿಗೆ ಪ್ರಾರಂಭ ಎಂದು ಎದುರು ನೋಡುತಿದ್ದವು. ಸಮಯಕ್ಕೆ ಸರಿಯಾಗಿ ಆಗಮಿಸಿದ ಅತಿಥಿಗಳ ಕಣ್ಣಲ್ಲಿ ಕಾಯಕ್ರಮದಲ್ಲಿ ಏನಿರುತ್ತದೋ ಎಂಬ ಕುತೂಹಲ ಇಣುಕುತ್ತಿದ್ದವು. ಎಲ್ಲರೂ ಕುರ್ಚಿಗಳನ್ನು ಅಲಂಕರಿಸಿದ ಮೇಲೆ, ಸೌಂಡ್ ಚೆಕ್ ಮತ್ತು ಮೈಕ್ ಚೆಕ್ ಮಾಡಿ ಶ್ರೀಧರ್ ನೊಣವಿನಕೆರೆ ಅವರು ಸ್ವಾಗತ ಭಾಷಣ ಮಾಡಿ, ಹಿರಿಯ ಅತಿಥಿಗಳಾದ ಶ್ರೀ ಭವಾನಿಶಂಕರ್ ಅವರನ್ನು ದೀಪ ಬೆಳಗಿಸಲು ವೇದಿಕೆಗೆ ಬರಮಾಡಿಕೊಂಡುರು. ತದನಂತರ ಶ್ರೀಮತಿ ದೀಪ್ತಿಯವರು ಸಾಂಸ್ಕೃತಿಕ ಕಾರ್ಯಕ್ರಮಗಳ ನಿರ್ವಾಹಕರಾಗಿ ಶುದ್ಧ ಕನ್ನಡದಲ್ಲಿ ಸಭಿಕರಿಗೆ ವಿವರವಾಗಿ ನಿವೇದಿಸಿದರು.

ಪ್ಯಾರಮಟ್ಟ ಕನ್ನಡ ಶಾಲೆಯಲ್ಲಿ ಕಲಿಯುತ್ತಿರುವ ಪುಟ್ಟ ಬಾಲಕ ಸ್ಕಂದ, ಜಯ ಭಾರತ ಜನನಿಯ ತನುಜಾತೆ ಹಾಡನ್ನು ಕೊಂಚವೂ ತಪ್ಪಿಲ್ಲದೆ ರಾಗವಾಗಿ ಹಾಡಿದನು. ಲಿವರ್ಪೂಲ್ ಶಾಲೆಯಲ್ಲಿ ಕನ್ನಡ ಕಲಿತು ಎರಡು ಪರೀಕ್ಷೆಗಳನ್ನು ಪಾಸು ಮಾಡಿ ಅಲ್ಲಿಯೇ ಚಿಕ್ಕ ಮಕ್ಕಳಿಗೆ ಪಾಠ ಹೇಳುತ್ತಿರುವ ಕುಮಾರಿ ಸಿಂಧು ಕೆಲವು ಪುರಂದರ ಮತ್ತು ಕನಕ ದಾಸರ ದೇವರ ನಾಮಗಳನ್ನು ಹಾಡಿದಳು. ಶ್ರೀಮತಿ ಸೌಮ್ಯರವರು ಯುಗಾದಿಯ ಪ್ರಯುಕ್ತ ವಿಧ ವಿಧವಾದ ಋತುಗಳನ್ನು ನೆನಪಿಸುವ ಭಾವಗೀತೆಗಳನ್ನ ಸುಶ್ರಾವ್ಯವಾಗಿ ಹಾಡಿ ಬಂದವರನ್ನು ಮನರಂಜಿಸಿದರು. ಮುಂದಿನ ಪುಟ ನೋಡಿ ...



ಕೇಳೋಣ



ಬಾದಾಮಿ ಬನಶಂಕರಿ ಬಗೆಗಿನ ಚಿತ್ರಣ ನೋಡಲು
ಮೇಲಿನ ಚಿತ್ರವನ್ನು ಕ್ಲಿಕ್ ಮಾಡಿ (Click picture to view)

ಓದುಗರ ಚೆನ್ನುಡಿ
ಪುಟ ೧೫



ತುಮಕೂರು ಜಿಲ್ಲೆಯ ಪಾವಗಡ ಬಗೆಗಿನ ಚಿತ್ರಣ ನೋಡಲು
ಮೇಲಿನ ಚಿತ್ರವನ್ನು ಕ್ಲಿಕ್ ಮಾಡಿ (Click picture to view)

ನೋಡೋಣ

ನಿಮ್ಮ ಕಥೆ, ಕವನ, ಸಲಹೆ ಇತ್ಯಾದಿ ನಮಗೆ ಕಳುಹಿಸಿ. ನಮ್ಮ ಇ-ಮೇಲ್ – HORANADACHILUME@GMAIL.COM

## ಸಿಡ್ನಿ ಯುಗಾದಿ ಹಬ್ಬದ ಆಚರಣೆಯ ಒಂದು ಕಿರು ನೋಟ

ಶ್ರೀಯುತ ಶ್ರೀನಿವಾಸ್ ಅವರು ಭಾವಗೀತೆಗಳು ಮತ್ತು ಅಕ್ಕಮಹಾದೇವಿಯ ವಚನಗಳನ್ನು ರಾಗವಾಗಿ ಹಾಡಿದರು. ಸ್ವಲ್ಪ ಹಾಡಿನ ಕಾರ್ಯಕ್ರಮದಲ್ಲಿ ಬದಲಾವಣೆ ಕ್ಯಾರಿಯೋಕೆ. ಕುಮಾರಿ ಸಿಂಧು ಮತ್ತು ಕುಮಾರಿ ನಿರೀಕ್ಷ ಅಪಾರ ಕೀರ್ತಿ ಹಾಡನ್ನು ಸಂಗೀತಕ್ಕೆ ತಕ್ಕ ಹಾಗೆ ಹೇಳಿ ಸಭಿಕರೂ ಧ್ವನಿಗೂಡಿಸಿದರು.

ಪುಟ್ಟ ಮಕ್ಕಳಾದ ಅಮೋಘ, ಧ್ರುವ ಮತ್ತು ಶ್ರೀಯುತ ವಿಜೇಂದ್ರ ನಟಿಸಿದ ಕಿರು ನಾಟಕ "ಯಮಲೋಕ" ನಮ್ಮನ್ನು ನಗೆಗಡಲಲ್ಲಿ ತೇಲಿಸಿತು. ಮಕ್ಕಳ ಸ್ಪಷ್ಟ ಕನ್ನಡ ಉಚ್ಚಾರಣೆ ಎಲ್ಲರಿಗೂ ಸಂತೋಷ ತಂದಿತು. ಪುಟಾಣಿಗಳಾದ ಕುಮಾರಿ ಅನೀಶ ಮತ್ತು ಕುಮಾರಿ ವಿಭಾ ಸೊಗಸಾದ ಹಾಡುಗಳನ್ನು ಹಾಡಿದರು.

ವೇದಿಕೆಗೆ ಈಗ ಶ್ರೀಮತಿ ಪೂರ್ಣಿಮಾ ಭಟ್ ಬಂದು ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಶ್ರೀನಿವಾಸ್ ಹೇಳಿದ "ಶಾರದೆ ದಯ ತೋರಿದೆ" ಭಕ್ತಿ ಪೂರಕವಾದ ಹಾಡು ಜನಗಳ ಮನ ಗೆದ್ದಿತು. ನಂತರದ ಡುಯೆಟ್ "ನೀ ಬಂದು ನಿಂತಾಗ" ಹಾಡನ್ನು ಶ್ರೀಮತಿ ಮತ್ತು ಶ್ರೀ ಅಂತೋನಿಯವರು ಮನ ತುಂಬಿ ಹಾಡಿ ರಂಜಿಸಿದರು. "ನೀನೆ ಸಾಕಿದಾ ಗಿಣಿ" ಹಾಡನ್ನು ಕೂಡ ಶ್ರೀಯುತ ಅಂತೋನಿಯವರು ಬಹಳ ಸೊಗಸಾಗಿ ಹಾಡಿದರು.

ಯುಗಾದಿ ಎಂದ ಮೇಲೆ "ಯುಗ ಯುಗಾದಿ" ಹಾಡನ್ನು ಹೇಳದೆ ಹೋದಲ್ಲಿ ಆಚರಣೆ ಸಪ್ಪೆಯಾಗಿಬಿಡುತ್ತದೆ. ಶ್ರೀಮತಿ ಜಯಂತಿಯವರು ಕ್ಯಾರಿಯೋಕಿ ರಾಗಕ್ಕೆ ಸುಂದರವಾಗಿ ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತ್ತಿದೆ ಎಂದು ಕಂಠಗೂಡಿಸಿದರು.

ನೆರೆದವರೆಲ್ಲಾ ಹಾಡಿನ ಗುಂಗಿನಲ್ಲೇ ಇರಬೇಕಾದರೆ, ಬಾಗಿಲ ಕಡೆಯಿಂದ ದೊಡ್ಡ ಶಬ್ದವೊಂದು ಬಂತು. ಜನರೆಲ್ಲಾ ಹಿಂದೆ ತಿರುಗಿ ಯಾರೀ ಮನುಷ್ಯ ಎಂದು ಮಾತಾಡಿಕೊಳ್ಳುತ್ತಿರುವಾಗಲೇ, ಶ್ರೀಯುತ ದಿವಾಕರ್ ಹೇರಳೆಯವರು ಪ್ರೇಮಾ ಕಾರಂತರ ಒಂದು ಜನಪ್ರಿಯ ನಾಟಕ "ಹಕ್ಕಿ ಹಾರುತಿದೆ ನೋಡಿದಿರಾ" ದೃಶ್ಯವನ್ನು ಅತ್ಯುತ್ತಮವಾಗಿ ಅಭಿನಯ ಮಾಡಿ ತೋರಿಸಿದರು. ವಿಧ ವಿಧವಾದ ಭಾವನೆಗಳನ್ನು ಒಬ್ಬನೇ ವ್ಯಕ್ತಿ ಕೆಲವೇ ನಿಮಿಷಗಳ ಅಂತರದಲ್ಲಿ ಸುಲಲಿತವಾಗಿ ಮಾಡಿದ್ದು ನೋಡಿ ನಮ್ಮ ಸಿಡ್ನಿಯ ಸಮುದಾಯದ ಪ್ರತಿಭೆ ಬಗ್ಗೆ ಹೆಮ್ಮೆ ಎನಿಸಿತು.

ಶ್ರೀಯುತ ಚೇತನ್ ರವರು "ರಾಮಾಚಾರಿಯ" ಜನಪ್ರಿಯ ಗೀತೆ "ಯಾರಿವಳು ಯಾರಿವಳು" ಹಾಡಿ ಸಭಿಕರ ಮನರಂಜಿಸಿದರು. ಶ್ರೀ ಶ್ರೀನಿವಾಸ್ ಅವರು "ಕನ್ನಡ ನಾಡಿನ ಜೀವನದಿ" ಗೀತೆಯನ್ನು ಕೂಡ ಬಹಳ ಚೆನ್ನಾಗಿ ಹಾಡಿದರು. ಶ್ರೀಯುತ ರಾಜೇಶ್ ಮತ್ತು ಸಂಗಡಿಗರು ಹಾಡಿದ ಹಾಸ್ಯಭರಿತವಾದ ಜನಪದಗೀತೆಗೆ ಪ್ರೇಕ್ಷಕರೂ ದನಿಗೂಡಿಸಿ ನಗೆಗಡಲಿನಲ್ಲಿ ತೇಲಾಡಿದರು.

ಕ್ಯಾರಿಯೋಕಿ ಹಾಡುಗಳ ನಂತರ "ಉದ್ವೇಗಂ ಪುರುಷ ಲಕ್ಷಣ" ಕಿರು ನಾಟಕವನ್ನು ಶ್ರೀಯುತ ನಾರಾಯಣ್ ಮತ್ತು ಸಂಗಡಿಗರು ಅಭಿನಯಿಸಿ ಸಭಿಕರನ್ನು ನಕ್ಕು ನಗಿಸಿದರು. ನಾಟಕ ನೋಡಿ ನಕ್ಕು ನಕ್ಕು ಸ್ವಲ್ಪ ಹೊಟ್ಟೆಯೂ ತಾಳ ಹಾಕುತಿತ್ತು. ಕಡೆಯದಾಗಿ ಶ್ರೀಯುತ ನಾರಾಯಣ್ ಅವರು ವಂದನಾರ್ಪಣೆ ಮಾಡಿ ಕಾರ್ಯಕ್ರಮಕ್ಕೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಪ್ರೋತ್ಸಾಹಿಸಿದವರನ್ನು ಹೆಸರಿಸಿ ಧನ್ಯವಾದಗಳನ್ನು ಅರ್ಪಿಸಿದರು.

ಇಷ್ಟೆಲ್ಲಾ ಮುಗಿಯುವ ಹೊತ್ತಿಗೆ ಬಿಸಿಬೇಳೆಬಾತ್, ಮೊಸರನ್ನ ಮತ್ತು ಕೇಸರಿಬಾತ್ ಎಲ್ಲರನ್ನೂ ಅದರ ಪರಿಮಳದಿಂದ ಆಚೆಗೆ ಸೆಳೆಯಿತು. ಬಂದವರಿಗೆಲ್ಲಾ ಭೂರಿ ಭೋಜನ ಏರ್ಪಡಿಸಿದ್ದ ಸುಗಮ ಗಾನ ಸಮಾಜಕ್ಕೆ ಜೈ ! ▪

ವರದಿ:ಸ್ಮಿತಾ ಮೇಲ್ಕೋಟೆ









# ಸಂಪಾದಕೀಯ



ಬದರಿ

ತ್ಯಾಮಗೊಂಡ್ಲು

"ತಾನು ಮಾಡಿದರುತ್ತಮ ..." ಎಂಬುದೊಂದು ಮಾತಿದೆ. ನಿಜ, ಬೇರೆಯವರ ಮೇಲೆ ಅವಲಂಬಿತರಾಗದೆ, ನಮ್ಮ ಕೆಲಸವನ್ನು ನಾವೇ ಮಾಡಿಕೊಳ್ಳುವುದು ಬಹಳ ನೆಮ್ಮದಿ ತರುವಂತಹದ್ದು. ಆಗ ಮಾಡುವ ಕೆಲಸದ ಮೇಲೆ ನಿಷ್ಠೆ ಹೆಚ್ಚಿರುತ್ತದೆ ಎಂದು ಅನೇಕರು ಹೇಳುವುದನ್ನು ನೀವೂ ಕೇಳಿರಬಹುದು. "ನನಗೇ ಮಾಡಿಕೊಳ್ಳುತ್ತಿದ್ದೀನಿ" ಅಂದ ತಕ್ಷಣ, "ನನಗೆ ಎಲ್ಲವೂ ಒಳ್ಳೆಯದ್ದೇ ಆಗಬೇಕು" ಎನ್ನುವ ಮನಸ್ಥಿತಿಯು ನಮ್ಮನ್ನು ಚೆನ್ನಾಗಿ ಕೆಲಸ ಮಾಡುವಂತೆ ಪ್ರೇರೇಪಿಸುತ್ತದೆ.

ಆದರೆ ನಮ್ಮ ಜೀವನವನ್ನು ಒಮ್ಮೆ ಇಣುಕಿ ನೋಡಿದರೆ, ನಾವೇ ಮಾಡಿಕೊಳ್ಳುವ ಕೆಲಸಗಳ ಜೊತೆಗೆ ಅನೇಕರ ಶ್ರಮದ ಮೇಲೆ ನಾವುಗಳು ಅವಲಂಬಿತರಾಗಿರುತ್ತೇವೆ. ಅದರಲ್ಲೂ ಪಟ್ಟಣಗಳಲ್ಲಿ ವಾಸಿಸುವ ಜನರಲ್ಲಿ ಆ ಶ್ರಮದ ಮೇಲಿನ ಆಧಾರದಿಂದಲೇ ಅವರ ಜೀವನವು ಸಾಂಗವಾಗಿ ನಡೆಯುತ್ತಿರುತ್ತದೆ ಎಂದರೆ ಸುಳ್ಳಾಗಲಾರದು. ಬದುಕನ್ನು ನಿಯಮಿತವಾಗಿ ನಡೆಸಲು ಆ ಜನರ ಅವಶ್ಯಕತೆ ಬಹಳ ಇರುತ್ತದೆ.

ಅಂತಹ ಅವಲಂಬಿತ ಜನರ ಬದುಕು ಕುಂಟುತ್ತಾ ಸಾಗಿದ್ದರೆ, ಅಲ್ಲಿ ನಮ್ಮ ಕೈಲಾದ ಸಹಾಯಹಸ್ತವನ್ನು ಚಾಚುವುದು ಮಾನವೀಯ ಮೌಲ್ಯಗಳಿಂದ ಅತಿ ಅವಶ್ಯಕ. ಅದನ್ನು ಮಾಡಲು ಅನೇಕ ಸಂಘ-ಸಂಸ್ಥೆಗಳು ಸಾಕಷ್ಟು ಇದ್ದು, ಕೆಲಸ ಮಾಡುತ್ತಲಿರಬಹುದು. ಆದರೆ ಅನೇಕ ಬಾರಿ ಆ ಜನರ ಕಷ್ಟಗಳು ಅವರ ಗಮನಕ್ಕೆ ಬರದೇ ಹೋಗಿರಲೂಬಹುದು. ಆದ್ದರಿಂದ, ಕಾರ್ಮಿಕ ದಿನಾಚರಣೆಯ ಈ ತಿಂಗಳಲ್ಲಿ, ನಮ್ಮ ನಮ್ಮ ಜೀವನದಲ್ಲಿ ಅಂತಹ ಜನರು ಇದ್ದಾರೆಯೇ ಎಂದು ಒಮ್ಮೆ ಆಲೋಚಿಸಿ, ನಮ್ಮ ಕೈಲಾದ ನೆರವನ್ನು ಅವರಿಗೆ ಕೊಟ್ಟರೆ, ಕೊಡಿಸಿಕೊಟ್ಟರೆ ಅವರ ಬದುಕೂ ಹಸನಾಗುವುದು, ನಮ್ಮ ಮನವೂ ಹಗುರಾಗುವುದು. ಹೃದಯವು ವಿಶಾಲವಾಗುವುದು. ಶಾಂತಿಯೆಡೆಗೆ ಮನುಕುಲವು ಸಾಗುವುದು. ▪

ಇದು ಹೊರನಾಡ ಚಿಲುಮೆಯ ೨೪ನೇ ಸಂಚಿಕೆ. ಅಂದರೆ ಸತತವಾಗಿ ಎರಡು ವರ್ಷದಿಂದ ಇ-ಪತ್ರಿಕೆಯಾಗಿ ನಿಮ್ಮೆಲ್ಲರ ಪ್ರೀತಿಯಿಂದ ಬೆಳೆದಿದೆ. ಇದಕ್ಕೆ ಕಾರಣರಾದ ಆತ್ಮೀಯ ಓದುಗರಿಗೆ, ಬರಹಗಾರರಿಗೆ, ಸಂಪಾದಕೀಯ ಸಮಿತಿಗೆ ಮತ್ತು ನಲ್ಮೆಯ ಕನ್ನಡವನ್ನು ಕಟ್ಟಿ, ಬೆಳೆಸಿ, ಪೋಷಿಸುವ ಎಲ್ಲರಿಗೂ ಧನ್ಯವಾದಗಳು. ನಿಮ್ಮ ಸಹಕಾರವಿರಲಿ.

## ಎರಡು ತಿಂಗಳ ಪ್ರಮುಖ ದಿನಗಳು

**ಮೇ ಶ್ರೀ ಮನ್ಮಥ ನಾಮ ಸಂವತ್ಸರ, ಉತ್ತರಾಯಣ, ವಸಂತ/ಗ್ರೀಷ್ಮ ಋತು, ವೈಶಾಖ/ಜ್ಯೇಷ್ಠ ಮಾಸ**

01 ಶು - ಕಾರ್ಮಿಕರ ದಿನಾಚರಣೆ
02 ಶ - ನೃಸಿಂಹ ಜಯಂತಿ
03/04 ಹುಣ್ಣಿಮೆ/ಬುದ್ಧ ಪೂರ್ಣಿಮಾ
07 ಗು - ಸಂಕಷ್ಟ ಚತುರ್ಥಿ
10 ಭಾ - ಮದರ್ಸ್ ಡೇ
14 ಗು - ಅಪರಾ ಏಕಾದಶಿ
17 ಭಾ - ಬಾದಾಮಿ ಅಮಾವಾಸ್ಯೆ
18 ಸೋ - ಸೋಮವತೀ ಅಮಾವಾಸ್ಯೆ
19 ಮಂ - ಜ್ಯೇಷ್ಠ ಮಾಸ ಆರಂಭ
29 ಶು - ನಿರ್ಮಲಾ ಏಕಾದಶಿ

**ಜೂನ್ ಶ್ರೀ ಮನ್ಮಥ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ/ಆಷಾಢ ಮಾಸ**

01 ಸೋ - ಹುಣ್ಣಿಮೆ
02 ಮಂ - ಕಾರ ಹುಣ್ಣಿಮೆ,ವಟ ಸಾವಿತ್ರಿ ವ್ರತ
03 ಬು - ಷಬ್ ಎ ಬರಾತ್
05 ಶು - ಸಂಕಷ್ಟ ಚತುರ್ಥಿ
12 ಶು - ಯೋಗಿನೀ ಏಕಾದಶಿ
16 ಮಂ - ಮಣ್ಣೆತ್ತಿನ ಅಮಾವಾಸ್ಯೆ
17 ಬು - ಆಷಾಢ ಮಾಸ ಆರಂಭ
18 ಗು - ರಂಜಾನ್ ಪ್ರಾರಂಭ
21 ಭಾ - ಫಾದರ್ಸ್ ಡೇ
28 ಭಾ - ಏಕಾದಶಿ

ಗಾಂಪರೊಡೆಯರು ಮತ್ತು ಅವರ ಶಿಷ್ಯರನ್ನು ೧೯೫೦-೧೯೬೦ರಲ್ಲಿ **ದಾಶರಥಿ ದೀಕ್ಷಿತ್** ಅವರು **ಕೊರವಂಜಿ** ಮಾಸಪತ್ರಿಕೆಯ ಮೂಲಕ ಕನ್ನಡಿಗರಿಗೆ ಮರುಪರಿಚಯ ಮಾಡಿಕೊಟ್ಟಿದ್ದು ನಿಜ. ಆದರೆ ಇನ್ನೂ ಬಹಳ ಹಿಂದೆಯೇ, ೧೯೨೦ರ ದಶಕದಲ್ಲಿ, ಪ್ರಾಕ್ತನ ವಿಮರ್ಶವಿಚಕ್ಷಣ ರಾವ್ ಬಹದೂರ್ **ಆರ್. ನರಸಿಂಹಾಚಾರ್ಯರು** ತಮ್ಮ **"ನಗೆಗಡಲು"** ಎಂಬ ಪುಸ್ತಕದಿಂದ ಗಾಂಪರ ಗುಂಪನ್ನು ಕನ್ನಡಿಗರಿಗೆ ಮೊದಲು ಪರಿಚಯ ಮಾಡಿಕೊಟ್ಟಿದ್ದರು. ತಮ್ಮ ಗಾಂಪರ ಕಥೆಗಳಿಗೆ ಸ್ಪೂರ್ತಿ ಕೊಟ್ಟ ಪುಸ್ತಕಗಳಲ್ಲಿ ಈ **"ನಗೆಗಡಲು"** ಮುಖ್ಯವಾದದ್ದು ಎಂದು ದೀಕ್ಷಿತರೇ ತಮ್ಮ **"ಗಾಂಪಾಯಣ"** ಎಂಬ ಪುಸ್ತಕದ ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ.



ಸಾಂದರ್ಭಿಕ ಚಿತ್ರ - ಆರ್ ನರಸಿಂಹಾಚಾರ್ಯರು

ಇಂತಹ ದಡ್ಡರ ಕಥೆಗಳು ಪ್ರಾಚೀನಕಾಲದಿಂದಲೂ ಭಾರತೀಯ ಜನಸಮುದಾಯವನ್ನು ಮನರಂಜಿಸುತ್ತಿದ್ದುವು ಎಂಬುದರಲ್ಲಿ ಸಂಶಯವಿಲ್ಲ. ಉದಾಹರಣೆಗೆ ಕ್ರಿ.ಶ. ೧೦೬೧-೧೦೮೩ ರಲ್ಲಿ ರಚಿತವಾದ ಸಂಸ್ಕೃತದ **"ಕಥಾಸರಿತ್ಸಾಗರ"**ದಲ್ಲೂ, ಮೂರ್ಖರ ಕಥೆಗಳಿವೆ. ಆದರೆ ಗಾಂಪರ ಕಥೆಗಳನ್ನೇ ಒಂದು ಪುಸ್ತಕವಾಗಿ ಮೊದಲು ಬರೆದು ಪ್ರಕಟಿಸಿದ ಕೀರ್ತಿ **ಕಾನ್ಸ್ಟಂಟೀನೋ ಬೆಸ್ಚಿ** (Constantino Beschi) ಎಂಬ ಪಾದ್ರಿಗೆ ಸಲ್ಲುತ್ತದೆ. ಈ ಬೆಸ್ಚಿ ಮೂಲತಃ ಇಟಲಿ ದೇಶದವನು. ಕ್ರಿ.ಶ. ೧೭೧೦ರಲ್ಲಿ. ಭಾರತಕ್ಕೆ ಬಂದು ತಮಿಳು ನಾಡಿನಲ್ಲಿ ನೆಲಸಿದನು. ಅಲ್ಲಿನ ಜನರೊಡನೆ ಒಂದಾಗಿ ಬೆರೆತು, ತಮಿಳು ಭಾಷೆಯನ್ನು ಚೆನ್ನಾಗಿ ಕಲಿತು ಅದರ ವ್ಯಾಕರಣ ಮತ್ತು ತಮಿಳು-ಲ್ಯಾಟಿನ್ ನಿಘಂಟುಗಳನ್ನು ರಚಿಸಿದ್ದಲ್ಲದೆ, ಅಲ್ಲಿನ ಜನಪದ ಕಥೆಗಳನ್ನೂ ಸಂಗ್ರಹಿಸಿದನು. ಕ್ರಿ.ಶ. ೧೭೪೭ರಲ್ಲಿ ಅವನ ಮರಣವಾದ ಕಾರಣ, ಅವನಿಗೆ ತನ್ನ ತಾಯ್ನಾಡಿಗೆ ಹಿಂದಿರುಗಬೇಕೆಂಬ ಬಯಕೆಯಿದ್ದರೂ, ಅದು ಈಡೇರಲಿಲ್ಲ.

ಬೆಸ್ಚಿಯ ಕಥೆಗಳನ್ನೇ ಆಧಾರವಾಗಿಟ್ಟುಕೊಂಡು ಮದ್ರಾಸ್ ಪ್ರಾಂತ್ಯದಲ್ಲಿ ಸರ್ಕಾರಿ ಅಧಿಕಾರಿಯಾಗಿದ್ದ ಬೆಂಜಮಿನ್ ಬ್ಯಾಬಿಂಗ್ ಟನ್ (Benjamin Babbington ) ಎಂಬುವನು ಇಂಗ್ಲಿಷ್ ಭಾಷೆಯಲ್ಲಿ **"The Adventures of Guru Paramaarthan"** ಎಂಬ ಗ್ರಂಥವನ್ನು ರಚಿಸಿದನು. ೧೮೨೨ರಲ್ಲಿ ರಚಿತವಾದ ಈ ಪುಸ್ತಕದಲ್ಲಿ ತಮಿಳಿನ ಮೂಲವೂ ಇದೆ, ತಮಿಳು-ಇಂಗ್ಲಿಷ್ ಶಬ್ದಕೋಶವೂ ಇದೆ ಮತ್ತು ಮೊದಲನೆಯ ಅಧ್ಯಾಯವನ್ನು ಪ್ರತಿಪದಾರ್ಥ ಮತ್ತು ತಾತ್ಪರ್ಯ ಸಹಿತವಾಗಿ ವಿವರಿಸಲಾಗಿದೆ. **ದೂಬ್ವಾ** ಪಾದ್ರಿಯೂ (Abbe Dubois) ತನ್ನ **"The Exploits of Guru Paramaartha"** ಪುಸ್ತಕವನ್ನು ಇದೇ ಸಮಯದಲ್ಲಿ ಬರೆದನೆಂದು ತೋರುತ್ತದೆ. **ದೂಬ್ವಾ** ಮೈಸೂರು ಸಂಸ್ಥಾನದಲ್ಲೇ ಬಹು ಕಾಲ ಇದ್ದುದರಿಂದ ಪ್ರಾಯಶಃ ಅವನ ಗ್ರಂಥವು ಕನ್ನಡ ನಾಡಿನಲ್ಲಿ ಪ್ರಚಲಿತವಿದ್ದ ಇದೇ ಬಗೆಯ ಕಥೆಗಳಿಂದ ಪ್ರಭಾವಿತವಾಗಿರಬಹುದು.

ನರಸಿಂಹಾಚಾರ್ಯರ **"ನಗೆಗಡಲು"** ಬಹುಮಟ್ಟಿಗೆ ಬ್ಯಾಬಿಂಗ್ ಟನ್ ನ ಪುಸ್ತಕದ ಭಾಷಾಂತರವೆಂದು ಕಾಣುತ್ತದೆ.ಇದರಲ್ಲಿನ ಕಥೆಗಳಾದ "ಹೊಳೆಯನ್ನು ದಾಟಿದುದು", "ಕುದುರೆ ಮೊಟ್ಟೆಯನ್ನು ಕೊಂಡುಕೊಂಡುದು", "ಬಾಡಿಗೆ ಎತ್ತನ್ನು ಹತ್ತಿಕೊಂಡು ಹೋದುದು" ಮುಂತಾದ ಕಥೆಗಳು ಹೊಟ್ಟೆ ಹುಣ್ಣಾಗುವಂತೆ ನಗಿಸುತ್ತವೆ, ಇವುಗಳನ್ನು ಒಮ್ಮೆ ಓದಿದರೆ ಮರೆಯುವಂತೆಯೇ ಇಲ್ಲ, ಆದರೂ ಮತ್ತೆ ಮತ್ತೆ ಓದಬೇಕೆನಿಸುತ್ತವೆ.

ಮುಂದಿನ ಪುಟ ನೋಡಿ ...

ಆಚಾರ್ಯರು ತಮ್ಮದೇ ಆದ ಕನ್ನಡ ಮತ್ತು ಸಂಸ್ಕೃತ ಚುಟುಕು ಪದ್ಯಗಳನ್ನೂ **ನಗೆಗಡಲಿನಲ್ಲಿ** ಸೇರಿಸಿದ್ದಾರೆ. ಇದು ಮಾತ್ರವಲ್ಲ, ಬ್ಯಾಬಿಂಗ್ ಟನ್ ಮತ್ತು ದೂಬ್ವಾ ಗ್ರಂಥಗಳಲ್ಲಿ ಇಲ್ಲದಿರುವ ಅನೇಕ ಕಥೆಗಳು **ನಗೆಗಡಲಿನಲ್ಲಿ** ಇವೆ. ಆದ್ದರಿಂದ ಆಚಾರ್ಯರಿಗೆ ಮತ್ತೆ ಯಾವುದೋ ಗ್ರಂಥದ ಅಥವಾ ಇತರರ ಬಾಯಿಂದ ಕೇಳಿದ ಕಥೆಗಳೂ ಗೊತ್ತಿರಬೇಕು. ಅವುಗಳಲ್ಲಿ ಒಂದನ್ನು ಮಾತ್ರ ಕೆಳಗೆ ಉದ್ಧರಿಸಲಾಗಿದೆ (ಬ್ರಾಕೆಟ್ ನಲ್ಲಿರುವ ಪದಗಳನ್ನು ಮಾತ್ರ ಈ ಲೇಖನಕ್ಕಾಗಿ ಸೇರಿಸಿದ್ದೇನೆ.): ▪

ಅವರು (ಶಿಷ್ಯರು) ಅಲ್ಲಿಂದ ಹೊರಟು ಉತ್ಸವದೇವರನ್ನು ಬಿಜಯ ಮಾಡಿಸಿದ್ದ ಮಂಟಪಕ್ಕೆ ಬಂದರು. ಅಲ್ಲಿ ದೇವರಿದಿರಿಗೆ ಸೂಳೆಯ ಕುಣಿತವಾಗುತ್ತಿದ್ದಿತು. ಎಲ್ಲರೂ ಸೂಳೆಯ ಮೇಲೆಯೇ ಕಣ್ಣಾಗಿ ನೋಡುತ್ತಾ ಕುಳಿತಿದ್ದರು. ಇವರೂ ಹೋಗಿ ಒಂದು ಕಡೆ ಕುಳಿತುಕೊಂಡರು. ಆ ಮಂಟಪದಲ್ಲಿ "ಲಸ್ತರು" (ಒಂದು ಬಗೆಯ ತೂಗುದೀಪ), "ಗುಳೋಪು" (globe), "ಕಂದೀಲು" (ಲಾಟೀನು) ಯಾವುದೂ ಇರಲಿಲ್ಲ. ನಾಲ್ಕೈದು ಹಣತೆಗಳು ಮಾತ್ರ ಮಿಣಮಿಣನೆ ಉರಿಯುತ್ತಿದ್ದುವು. ಸೂಳೆಯ ಹಾವಭಾವವಿಲಾಸಗಳೂ, ಅಭಿನಯವೂ ಚೆನ್ನಾಗಿ ಸಭೆಯವರಿಗೆ ಕಾಣಬರುವುದಕ್ಕಾಗಿ ಅವಳ ಎಡಬಲಗಳಲ್ಲಿ ಇಬ್ಬರು ದೀವಟಿಗೆಗಳನ್ನು ಹಿಡಿದುಕೊಂಡು ಅವಳು ಮುಂದಕ್ಕೆ ಹೋದರೆ ತಾವೂ ಹೋಗುತ್ತ, ಹಿಂದಕ್ಕೆ ಬಂದರೆ ತಾವೂ ಬರುತ್ತಾ, ಯಾವ ಕಡೆಗೆ ತಿರುಗಿದರೆ ಆ ಕಡೆಗೆ ದೀವಟಿಗೆಗಳನ್ನು ತಿರುಗಿಸಿ ಹಿಡಿಯುತ್ತ ಇದ್ದರು. ಇದನ್ನು ನೋಡಿ ಮಡ್ಡಿ "ಇವಳು ಬಹಳ ಜಾಣೆ. ಆ ಇಬ್ಬರೂ ಇವಳನ್ನು ಸುಡುವುದಕ್ಕೆ ಏನೇನೋ ಪ್ರಯತ್ನ ಮಾಡಿ ತಲೆಕೆಳಗಾಗಿ ಬೀಳುತ್ತಾರೆ. ಆದರೂ ಇವಳು ಮುಂದಕ್ಕೂ ಹಿಂದಕ್ಕೂ ಆ ಕಡೆಗೂ ಈ ಕಡೆಗೂ ಹೋಗಿ ಅವರಿಗೆ ಸ್ವಲ್ಪವೂ ಅವಕಾಶ ಕೊಡದೆ ತಪ್ಪಿಸಿಕೊಳ್ಳುತ್ತ ಇದ್ದಾಳೆ. ಇನ್ನಿಷ್ಟೇ ಜಾಣೆಯಾದರೂ ಎಷ್ಟು ಹೊತ್ತು ತಪ್ಪಿಸಿಕೊಂಡಾಳು? ನೋಡಬೇಕು" ಎಂದು ಮನದಲ್ಲಿ ಆಲೋಚಿಸುತ್ತಿದ್ದನು. ಸ್ವಲ್ಪ ಹೊತ್ತಿನ ಮೇಲೆ ಅವಳು ಮೂರ್ಛಾವಸ್ಥೆಯನ್ನು ಅಭಿನಯಿಸುವುದಕ್ಕಾಗಿ ಒಂದು ಕಡೆ ಸ್ವಲ್ಪ ಬಾಗಿ ಕದಲದೆ ನಿಂತಿದ್ದಳು. ಆಗ ಮಡ್ಡಿ ದೀವಟಿಗೆಯವರನ್ನು ನೋಡಿ "ಈಗ ಸೀಯಿರೋ! ಈಗ ಸೀಯಿರೋ! ಅಯ್ಯೋ! ನಿಮಗೆ ಬುದ್ಧಿಯೇ ಇಲ್ಲವಲ್ಲಾ! ಈಗ ಬಿಟ್ಟರೆ ತಿರುಗಿ ಸಿಕ್ಕಾಳೆ?" ಎಂದು ಕೂಗಿಕೊಂಡನು. ಅದನ್ನು ಕೇಳಿದ ಕೂಡಲೇ ಸೂಳೆ ಬೆಚ್ಚಿಕೊಂಡು ಕಣ್ಣನ್ನು ಅಗಲವಾಗಿ ಬಿಟ್ಟು ಸುತ್ತಲೂ ನೋಡಿದಳು; ಅಲ್ಲಿದ್ದ ಜನರೆಲ್ಲಾ ಪಕ್ಕನೆ ನಕ್ಕರು. ಅವರಲ್ಲಿ ಒಬ್ಬನು ಮಡ್ಡಿಯನ್ನು ನೋಡಿ "ಅಯ್ಯಾ! ನೀನು ಭರತಾಚಾರ್ಯರ ಅಪರಾವತಾರವೇ ಸರಿ. ಕೋಟಿ ರೂಪಾಯಿ ಕೊಟ್ಟರೂ ನಿನ್ನಂಥ ರಸಿಕನು ಜಗದಲ್ಲಿ ದೊರೆಯಲಾರನು. ನಿನ್ನ ತಂದೆತಾಯಿಗಳು ಪುಣ್ಯಾತ್ಮರು. ಅವರ ಪುಣ್ಯವನ್ನು ಅಷ್ಟಿಷ್ಟೆಂದು ಹೇಳಲು ಯಾರಿಗೂ ಸಾಧ್ಯವಲ್ಲ" ಎಂದನು. ಮತ್ತೊಬ್ಬನು ಬಹಳ ಸಿಟ್ಟುಗೊಂಡು "ಹೀಗೆ ಮಾತನಾಡಿದರೆ ಆ ಮೃಗಕ್ಕೆ ಗೊತ್ತಾಗುತ್ತದೆಯೇ?" ಎಂದು ಮಡ್ಡಿಯನ್ನು ಕುರಿತು "ಎಲಾ! ತಿರುಗಿ ಏನಾದರೂ ಮಾತುಗೀತಾಡಿದೆಯೋ ಕತ್ತು ಹಿಡಿದು ಆಚೆಗೆ ದಬ್ಬಿಬಿಡುತ್ತೇನೆ. ಸದ್ದು ಮಾಡದೆ ಕುಳಿತಿರು. ಇಲ್ಲದಿದ್ದರೆ ಎದ್ದು ತೊಲಗಿ ಹೋಗು" ಎಂದು ಗದರಿಸಿದನು. ಅದನ್ನು ಕೇಳಿ ಮಡ್ಡಿ ತನ್ನ ಮನದಲ್ಲಿ "ಈ ಊರ ಜನರು ಬುದ್ಧಿಯಿಲ್ಲದವರು. ನಾನು ಉಪಾಯವನ್ನು ಹೇಳಿಕೊಟ್ಟರೆ ನನಗೇ ಬೈಯುತ್ತಾರೆ. ನನಗೇನು? ದೀವಟಿಗೆಯವರು ಬೆಳಗಿನವರೆಗೆ ಹಿಂದೂ ಮುಂದೆ ಓಡಾಡಿ ಕಾಲುಸೋತು ಕೆಳಗೆ ಬೀಳಲಿ. ಒಳ್ಳೆಯ ಸಮಯವನ್ನು ಕಳೆದುಕೊಂಡರು. ಇನ್ನುಮೇಲೆ ಬೇರೆ ಅವಳನ್ನು ಸೀಯಲಾರರು" ಎಂದುಕೊಂಡು ಸುಮ್ಮನೆ ಕುಳಿತಿದ್ದನು.



ಕಡ್ಲೇಕಾಯಿ ಗಿಡದ ವೈಜ್ಞಾನಿಕ ಹೆಸರು ಆರೇಕಿಸ್ ಹೈಪೋಜಿಯ (Arachis hypogaea), ಲೆಗ್ಯೂಮಿನೊಸಿ (Leguminosae) ಕುಟುಂಬಕ್ಕೆ ಸೇರಿದ್ದು. ಕಡ್ಲೇಕಾಯಿಯ ಇತರ ಹೆಸರುಗಳು – ಶೇಂಗಾ, ನೆಲಗಡಲೆ, ಅರ್ತ್-ನಟ್, ಗ್ರೌಂಡ್-ನಟ್, ಪೀನಟ್ ಮತ್ತು ಮಂಕಿನಟ್. ಇದು ವಾರ್ಷಿಕ ಬೆಳೆ, ತವರು ಮಧ್ಯ ಅಮೇರಿಕಾ, ಕಾಲಾಂತರದಲ್ಲಿ ಪ್ರಪಂಚದ ಇತರ ಭಾಗಗಳಿಗೆ ಹರಡಿದೆಯೆಂದು ನಂಬಿಕೆ. ಈ ಕೊಬ್ಬಿನ ಬೀಜವನ್ನು ವಾಣಿಜ್ಯ ಬೆಳೆಯಾಗಿ ಚೈನಾ, ಭಾರತ, ಯುನೈಟೆಡ್ ಸ್ಟೇಟ್ಸ್ ಮತ್ತು ಆಫ್ರಿಕಾದ ಹಲವಾರು ದೇಶಗಳಲ್ಲಿ ಬೆಳೆಯುತ್ತಾರೆ ಮತ್ತು ಎಣ್ಣೆಯನ್ನು ಉತ್ಪಾದಿಸುತ್ತಾರೆ.

## ಪೋಷಕಾಂಶಗಳು

ಕಡ್ಲೇಕಾಯಿ ಎಣ್ಣೆಯಲ್ಲಿ ಆರೋಗ್ಯಪೂರಕವಾದ ಮಾನೋ-ಅನ್ಸ್ಯಾಚುರೇಟೆಡ್ ಕೊಬ್ಬು (monounsaturated fat) ಶೇಕಡಾ 49ರಷ್ಟು ಮತ್ತು ಪಾಲಿ-ಅನ್ಸ್ಯಾಚುರೇಟೆಡ್ ಕೊಬ್ಬು (polyunsaturated fat) ಶೇಕಡಾ 33ರಷ್ಟು ಇದೆ. ಅಲ್ಲದೆ ದೇಹರಕ್ಷಕ ಆಂಟಿ-ಆಕ್ಸಿಡೆಂಟ್ (anti-oxidant) ಗಳಾದ ವಿಟಮಿನ್ 'ಇ', ಫೈಟೊಸ್ಟಿರಾಲ್ (phytosterol), ರೆಸ್ವೆರಟ್ರಾಲ್ (Resveratrol) ಕೂಡ ಗಣನೀಯ ಪ್ರಮಾಣದಲ್ಲಿವೆ. ಅನಾರೋಗ್ಯಕರವಾದ ಸಾಂದ್ರೀಕೃತ ಕೊಬ್ಬು (saturated fat) ಅತಿ ಕಡಿಮೆ ಪ್ರಮಾಣದಲ್ಲಿದೆ (ಶೇಕಡಾ 18). ಕೊಲೆಸ್ಟಿರಾಲ್ ಇಲ್ಲ (ಸಸ್ಯಜನ್ಯ ಆಹಾರಪದಾರ್ಥಗಳಲ್ಲಿ ಕೊಲೆಸ್ಟಿರಾಲ್ ಇರುವುದಿಲ್ಲ).

## ಆರೋಗ್ಯದಾಯಕ ಮತ್ತು ಆರೋಗ್ಯಪೂರಕ ಗುಣಗಳು

ಕಡ್ಲೇಕಾಯಿ, ಕಡ್ಲೇಕಾಯಿ ಹಿಟ್ಟು, ಕಡ್ಲೇಕಾಯಿ ಎಣ್ಣೆ ಬಳಸುವುದರಿಂದ -

- ಹೃದಯರೋಗ, ಹೃದಯಾಘಾತ, ಪಾರ್ಶ್ವವಾಯು (ಲಕ್ವ) ಮುಂತಾದ ರೋಗಗಳನ್ನು ತಡೆಹಿಡಿಯಬಹುದು.
- ರಕ್ತದಲ್ಲಿನ ಒಳ್ಳೆಯ ಕೊಲೆಸ್ಟಿರಾಲನ್ನು (HDL) ಹೆಚ್ಚಿಸಬಹುದು, ಕೆಟ್ಟ ಕೊಲೆಸ್ಟಿರಾಲನ್ನು (LDL) ತಗ್ಗಿಸಬಹುದು.
- ಆಂಟಿ-ಆಕ್ಸಿಡೆಂಟ್ ವಿಟಮಿನ್ 'ಇ' ಜೀವಕೋಶಗಳನ್ನು ರಕ್ಷಿಸಿ, ಕೆಲ ಬಗೆಯ ಕ್ಯಾನ್ಸರ್ ಗಳನ್ನು ತಡೆಹಿಡಿಯುತ್ತದೆ.
- ರೆಸ್ವೆರಟ್ರಾಲ್ ಎಂಬ (ರೆಡ್ ವೈನ್ ನಲ್ಲಿರುವ ) ಆಂಟಿ-ಆಕ್ಸಿಡೆಂಟ್ ಕ್ಯಾನ್ಸರ್ ಗಳಿಂದ, ಹೃದಯರೋಗಗಳಿಂದ, ಆಲ್ಜೈಮರ್ಸ್ (Alzheimer's) ಖಾಯಿಲೆಯಿಂದ ರಕ್ಷಣೆ ನೀಡುತ್ತದೆ ಎಂದು ತಿಳಿದುಬಂದಿದೆ.

ಪೆನ್ ಸ್ಟೇಟ್ ಯುನಿವರ್ಸಿಟಿ (Penn State University) ಯಲ್ಲಿ ನಡೆಸಿದ ಒಂದು ಅಧ್ಯಯನದ ಬಗ್ಗೆ ಇಲ್ಲಿ ತಿಳಿಸುತ್ತೇನೆ[1]. ಈ ಅಧ್ಯಯನದ ಗುರಿ – **ಕಡ್ಲೆಕಾಯಿಯ ಉತ್ಪನ್ನಗಳು ರಕ್ತದಲ್ಲಿನ ಕೊಲೆಸ್ಟಿರಾಲನ್ನು ತಗ್ಗಿಸುವುದರಲ್ಲಿ ಆಲಿವ್ ಎಣ್ಣೆಯಷ್ಟೇ ಪರಿಣಾಮಕಾರಿಯೇ? ಎಂದು ತಿಳಿಯುವುದು.**

ಈ ಅಧ್ಯಯನದಲ್ಲಿ ಭಾಗವಹಿಸಿದ್ದ 22 ಜನರಿಗೆ 5 ವಿಧದ ಆಹಾರಕ್ರಮವನ್ನು (diet) ಪಾಲಿಸುವಂತೆ ಹೇಳಲಾಯಿತು ಮತ್ತು ಆಹಾರವನ್ನು ತಯಾರಿಸಿ ನೀಡಲಾಯಿತು. 3 ವಿಧದ ಆಹಾರಕ್ರಮ ಪಾಲಿಸಿದವರ ಫಲಿತಾಂಶದ ಬಗ್ಗೆ ಮಾತ್ರ ಇಲ್ಲಿ ಹೇಳುತ್ತೇನೆ.

1. ಆಲಿವ್ ಎಣ್ಣೆ ಹೊಂದಿದ ಆಹಾರಕ್ರಮ.
2. ಕಡ್ಲೇಕಾಯಿ ಎಣ್ಣೆ ಹೊಂದಿದ ಆಹಾರಕ್ರಮ.
3. ಕಡ್ಲೇಕಾಯಿ ಮತ್ತು ಪೀನಟ್ ಬಟರ್ ಹೊಂದಿದ ಆಹಾರಕ್ರಮ.

ಈ ಎಲ್ಲ ಆಹಾರಕ್ರಮಗಳಲ್ಲೂ ಇದ್ದ ಒಟ್ಟು ಕೊಬ್ಬಿನ (total fat) ಅಂಶ ಶೇಕಡಾ 35 ಮತ್ತು ಮಾನೋ-ಅನ್ಸ್ಯಾಚುರೇಟೆಡ್ ಕೊಬ್ಬಿನ ಅಂಶ ಶೇಕಡಾ 17 ರಿಂದ 21. **ಫಲಿತಾಂಶ**: ಎಲ್ಲರಲ್ಲಿಯೂ ಒಟ್ಟು ಕೊಲೆಸ್ಟಿರಾಲ್ ಅಂಶ ಶೇಕಡಾ 10, ಕೆಟ್ಟ ಕೊಲೆಸ್ಟಿರಾಲ್ ಅಂಶ ಶೇಕಡಾ 14 ರಷ್ಟು ಇಳಿದಿತ್ತು. ಹೃದಯ ರಕ್ತ ಪರಿಚಲನಾ ಸಂಬಂಧಿ ರೋಗಗಳ ಅಪಾಯ ಶೇಕಡಾ 16 ರಿಂದ 25 ರಷ್ಟು ಇಳಿದಿತ್ತು.

ಈ ಅಧ್ಯಯನದಿಂದ ತಿಳಿದು ಬಂದಿರುವುದೇನೆಂದರೆ **ಕಡ್ಲೆಕಾಯಿಯ ಉತ್ಪನ್ನಗಳು ರಕ್ತದಲ್ಲಿನ ಕೊಲೆಸ್ಟಿರಾಲನ್ನು ತಗ್ಗಿಸುವುದರಲ್ಲಿ ಮತ್ತು ಹೃದಯ ರಕ್ತ ಪರಿಚಲನಾ ಸಂಬಂಧಿ ರೋಗಗಳನ್ನು ತಡೆಹಿಡಿಯುವುದರಲ್ಲಿ ಆಲಿವ್ ಎಣ್ಣೆಯಷ್ಟೇ ಪರಿಣಾಮಕಾರಿ ಎಂದು.**

## ಉಪಯೋಗಗಳು

ಕಡ್ಲೇಕಾಯಿ ಎಣ್ಣೆಯನ್ನು ದಕ್ಷಿಣ ಮತ್ತು ದಕ್ಷಿಣ ಪೂರ್ವ ಏಷ್ಯಾದ ಹಲವಾರು ದೇಶಗಳಲ್ಲಿ ಅಡಿಗೆಗೆ ಬಳಸುತ್ತಾರೆ. ಮಾರ್ಜರೀನ್ (margarine) ಮತ್ತು ಸಲಾಡ್ ಡ್ರೆಸ್ಸಿಂಗ್ (salad dressing) ತಯಾರಿಕೆಯಲ್ಲೂ ಉಪಯೋಗಿಸುತ್ತಾರೆ. ಆಹಾರ ಪದಾರ್ಥಗಳನ್ನು ಕರಿಯಲು ಇದು ಅತ್ಯಂತ ಸೂಕ್ತವಾದ ಎಣ್ಣೆ. ಕಾರಣ: ಇದನ್ನು ಹೆಚ್ಚು ಉಷ್ಣಮಾನಕ್ಕೆ ಕಾಯಿಸಿದರೂ ಹೊಗೆಯಾಡುವುದಿಲ್ಲ (ಹೊಗೆ ಬಿಂದು 225°C), ಪದಾರ್ಥಗಳು ಹೆಚ್ಚು ಎಣ್ಣೆಯನ್ನು ಹೀರಿಕೊಳ್ಳುವುದಿಲ್ಲ.

ಮುಂದಿನ ಪುಟ ನೋಡಿ ...

ಒಮ್ಮೆ ಕರಿಯಲು ಉಪಯೋಗಿಸಿದ ಎಣ್ಣೆಯನ್ನು ಮತ್ತೆರೆಡು ಸಲ ಮಾತ್ರ  ಉಪಯೋಗಿಸಬಹುದು. ಆದರೆ ಒಂದು ಚೊಕ್ಕಟವಾದ ಬಟ್ಟೆಯಲ್ಲಿ ಶೋಧಿಸಿ, ಶೀಸೆಯಲ್ಲಿ ಹಾಕಿ, ಬಿಗಿಯಾಗಿ ಮುಚ್ಚಳ ಮುಚ್ಚಿ ರೆಫ್ರಿಜರೇಟರಿನಲ್ಲಿಟ್ಟಿರಬೇಕು.

ಕಡ್ಲೇಕಾಯಿ ಎಣ್ಣೆ ಆರೋಗ್ಯಪೂರಕ, ಭಾರತೀಯ ಅಡಿಗೆಗೆ ಚೆನ್ನಾಗಿ ಹೊಂದುತ್ತದೆ ಎನ್ನುವುದು ನಿಜ. ಹಾಗೆಂದು ಹೆಚ್ಚು ಬಳಸಬೇಡಿ. ದಿನಕ್ಕೆ ಒಬ್ಬರಿಗೆ 4 ರಿಂದ  8 ಟೀ ಚಮಚೆ ಎಣ್ಣೆ ಸಾಕು. ನೆನಪಿಡಿ: ಒಂದು ಟೀ ಚಮಚೆ ಎಣ್ಣೆಯಲ್ಲಿ 36 ಕ್ಯಾಲೋರಿಗಳಿವೆ. ಎಣ್ಣೆಯನ್ನು ಒಗ್ಗರಣೆಗೆ ಮಾತ್ರ ಬಳಸಿ. ಕರಿದ ತಿನಿಸುಗಳನ್ನು ವಿಶೇಷ ಸಮಾರಂಭಗಳಲ್ಲಿ ಮಾತ್ರ ಬಳಸಿ. ಕಡ್ಲೆಕಾಯಿ ಭಾರತೀಯರಿಗೆ ಬಲು ಪ್ರಿಯ. ಅಲ್ಲದೆ ಕಡ್ಲೇಕಾಯಿಯಲ್ಲಿ ಸಸ್ಯಾಹಾರಿಗಳಿಗೆ ಬಲು ಅವಶ್ಯಕವಾದ ಪ್ರೋಟೀನ್ ಮತ್ತು ಇತರ ಅನೇಕ ಪೋಷಕಾಂಶಗಳಿವೆ. ಕೊಲೆಸ್ಟಿರಾಲನ್ನು ನಿಯಂತ್ರಣದಲ್ಲಿಡಲು, ಹೃದಯರೋಗಗಳನ್ನು ತಡೆಹಿಡಿಯಲು ಪ್ರತಿದಿನ 25 – 30 ಗ್ರಾಮ್ ಕಡ್ಲೇಕಾಯಿ ಸೇವಿಸಿ.

## ಯಾವ ಬಗೆಯ ಎಣ್ಣೆ?

ಮುಖ್ಯವಾಗಿ ಎರಡು ಬಗೆಯ ಕಡ್ಲೇಕಾಯಿ ಎಣ್ಣೆಗಳಿವೆ.

1. ಸಂಸ್ಕರಿಸದ (unrefined) ಎಣ್ಣೆ - ಎಣ್ಣೆ ತೆಗೆಯುವಾಗ ರಾಸಾಯನಿಕಗಳನ್ನೂ, ಶಾಖವನ್ನೂ ಉಪಯೋಗಿಸುವುದಿಲ್ಲ. ಇದರಲ್ಲಿ ಎರಡು ವಿಧ.
    - ವರ್ಜಿನ್ ಎಣ್ಣೆ - ತಿಳಿ ಹಳದಿ ಬಣ್ಣ, ಸಿಹಿ ಎನಿಸುವಂತ ರುಚಿ, ಸುವಾಸನೆ ಹೊಂದಿರುತ್ತದೆ .
    - ಕಡ್ಲೇಕಾಯಿ ಬೀಜಗಳನ್ನು ಹುರಿದು ತೆಗೆದ ಎಣ್ಣೆ - ಹೊಂಬಣ್ಣದ ಈ ಎಣ್ಣೆ ಸುವಾಸನಾಭರಿತವಾಗಿರುತ್ತದೆ. ಇದನ್ನು ಅಡಿಗೆಗೆ ಉಪಯೋಗಿಸುವುದಿಲ್ಲ. ಸಾಲಡ್ ಡ್ರೆಸ್ಸಿಂಗ್, ಸಾಸ್ ಮತ್ತು ಮ್ಯಾರಿನೇಡ್ ತಯಾರಿಸುವುದಕ್ಕೆ ಬಳಸುತ್ತಾರೆ.
2. ಸಂಸ್ಕರಿಸಿದ (refined) ಎಣ್ಣೆ – ರಾಸಾಯನಿಕಗಳನ್ನೂ, ಶಾಖವನ್ನೂ ಉಪಯೋಗಿಸಿ ತೆಗೆದ ಎಣ್ಣೆ. ಬಣ್ಣವನ್ನೂ, ವಾಸನೆಯನ್ನೂ, ಅಲರ್ಜಿಯನ್ನುಂಟು ಮಾಡುವ ಅಂಶಗಳನ್ನು ಕಳೆದುಕೊಂಡಿರುತ್ತದೆ. ಸಾಮಾನ್ಯವಾಗಿ ಎಲ್ಲ ಸೂಪರ್ ಮಾರ್ಕೆಟ್ಟಿನಲ್ಲಿ ದೊರಕುತ್ತದೆ. ಇದರಲ್ಲಿ ಎರಡು ವಿಧ.
    - ಪ್ಯೂರ್ ಅಥವಾ 100% ಪೀನಟ್ ಎಣ್ಣೆ (pure or 100% peanut oil) – ಶೀಸೆಯ ಮೇಲೆ 100% ಅಥವಾ ಘಟಕ ಸಾಮಗ್ರಿಗಳು (ingredients) ಎಂಬಲ್ಲಿ **ಕಡ್ಲೇಕಾಯಿ ಎಣ್ಣೆ** ಎಂದು ಮಾತ್ರ ಬರೆದಿದೆ ಎಂದು ಖಚಿತಪಡಿಸಿಕೊಳ್ಳಿ.
    - ಪೀನಟ್ ಎಣ್ಣೆ (peanut oil, blended peanut oil) – ಅಗ್ಗಬೆಲೆಯಲ್ಲಿ ದೊರಕುವ ಸೋಯಾ ಅಥವಾ ಕೆನೋಲ ಎಣ್ಣೆಯನ್ನು ಬೆರಕೆ ಮಾಡಿರುತ್ತಾರೆ.





**ನೆನಪಿಡಿ: ಕಲಬೆರಕೆ ಮಾಡಿದ ಎಣ್ಣೆಯನ್ನು ಕೊಳ್ಳಬೇಡಿ.**

## ಶೇಖರಿಸಿಡುವುದು ಹೇಗೆ?

ಎಣ್ಣೆ ತಯಾರಿಸಿದ ಒಂದೆರಡು ವರ್ಷದೊಳಗೆ ಉಪಯೋಗಿಸುವುದು ಉತ್ತಮ. ಶೀಸೆಯ ಮೇಲೆ ಎಣ್ಣೆ ತಯಾರಿಸಿದ ತಾರೀಕನ್ನು ನಮೂದಿಸಿರುತ್ತಾರೆ. ಗಾಳಿ, ಬೆಳಕು ಮತ್ತು ಶಾಖ ತಗಲಿದರೆ ಎಣ್ಣೆಯ ಗುಣಮಟ್ಟ ಕ್ಷೀಣಿಸುತ್ತದೆ. ರುಚಿ ಕೆಡುತ್ತದೆ. ಆದ್ದರಿಂದ ಗಾಳಿಯಾಡದಂತೆ ಬಿಗಿಯಾಗಿ ಮುಚ್ಚಳ ಮುಚ್ಚಿ, ತಂಪಾದ, ಬೆಳಕಿಲ್ಲದ ಸ್ಥಳದಲ್ಲಿಡಿ.

## ಅಪಾಯ ಮತ್ತು ಮುನ್ನೆಚ್ಚರಿಕೆ

ನೀವು ಪೀನಟ್ ಅಲರ್ಜಿಯ ಬಗ್ಗೆ ಕೇಳಿರಬಹುದು. ಈ ಸಮಸ್ಯೆ ನಿಮಗಿದ್ದಲ್ಲಿ ಸಂಸ್ಕರಿಸಿದ (refined) ಕಡ್ಲೇಕಾಯಿ ಎಣ್ಣೆಯನ್ನೇ ಉಪಯೋಗಿಸಿ.

ಅಫ್ಲಟಾಕ್ಸಿನ್ (aflatoxin) ಎಂಬುದು ನಾಯಿಕೊಡೆ ಅಥವಾ ಅಣಬೆಗಳಲ್ಲಿ ಉತ್ಪನ್ನವಾಗುವ ವಿಷ. ಈ ವಿಷ ಕ್ಯಾನ್ಸರ್ ಉಂಟುಮಾಡಬಹುದು. ವಾಣಿಜ್ಯ ಬೆಳೆಗಳಾದ ಕಡ್ಲೇಕಾಯಿ, ಜೋಳ ಇತ್ಯಾದಿ ಮತ್ತು ಅಡಿಗೆಗೆ ಬಳಸುವ ಎಣ್ಣೆಗಳು (ಉದಾ: ಆಲಿವ್, ಕಡ್ಲೇಕಾಯಿ ಮತ್ತು ಎಳ್ಳೆಣ್ಣೆ) ಮುಂತಾದುವುಗಳಿಗೆ ಅಫ್ಲಟಾಕ್ಸಿನ್  ಸೋಂಕು ಉಂಟಾಗಬಹುದು. ಯುನೈಟೆಡ್ ಸ್ಟೇಟ್ಸ್ ಮತ್ತು ಇತರ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಕಡ್ಲೆಕಾಯಿಗಳನ್ನು ಪರೀಕ್ಷಿಸಿ, ಅಫ್ಲಟಾಕ್ಸಿನ್ ಸೋಂಕು ಇದ್ದವುಗಳನ್ನು ನಾಶಮಾಡಲಾಗುತ್ತದೆ. ಭಾರತದಲ್ಲಿ ಈ ಪರೀಕ್ಷೆ ನಡೆಯುತ್ತದೋ, ಇಲ್ಲವೋ ಎಂದು ತಿಳಿದಿಲ್ಲ. ಆದ್ದರಿಂದ ಪ್ರತಿಷ್ಠಿತ ಸಂಸ್ಥೆಗಳು (ಕಂಪನಿಗಳು) ತಯಾರಿಸಿದ ಎಣ್ಣೆಯನ್ನು ಖರೀದಿಸುವುದು ಉತ್ತಮ.

ಅತ್ಯಂತ ಹೆಚ್ಚು ಶಾಖ, ಅಲ್ಟ್ರ ವಾಯ್ಲೆಟ್ ಲೈಟ್ ಮತ್ತು ಮೈಕ್ರೋವೇವ್ ಶಾಖ ಅಫ್ಲಟಾಕ್ಸಿನ್ ಅನ್ನು ನಾಶಮಾಡುವುದಿಲ್ಲ. ಶಾಂತ ಮತ್ತು ಶ್ರೀನಿವಾಸಮೂರ್ತಿಯವರು (1975, 1977, 1980) ನಡೆಸಿದ ಸಂಶೋಧನೆಯಿಂದ, ಎಣ್ಣೆಯಿರುವ ಗಾಜಿನ ಶೀಸೆಯನ್ನು ಒಂದು ಘಂಟೆಯ ಕಾಲ ಪ್ರಖರ ಬಿಸಿಲಿನಲ್ಲಿಟ್ಟಲ್ಲಿ ಅಫ್ಲಟಾಕ್ಸಿನ್ ನಾಶವಾಗುತ್ತದೆ ಎಂದು ತಿಳಿದುಬಂದಿದೆ[2]. ಬಿಸಿಲಿನಲ್ಲಿಟ್ಟಾಗ ಎಣ್ಣೆಯ ಗುಣಮಟ್ಟ ಕ್ಷೀಣಿಸುತ್ತದೆ ಎಂಬುದು ನಿಜ. ಆದರೆ ಅಫ್ಲಟಾಕ್ಸಿನ್ ಕ್ಯಾನ್ಸರ್ ಕಾರಕ. ಎಣ್ಣೆಯಲ್ಲಿರುವ ಪೋಷಕಾಂಶಗಳನ್ನು ಇತರ ಆಹಾರಗಳಿಂದ ಸುಲಭವಾಗಿ ಪಡೆಯಬಹುದು.

ಮುಂದಿನ ಪುಟ ನೋಡಿ ...

## ಕಡ್ಲೇಕಾಯಿ ಚಟ್ನಿಪುಡಿ



### ಬೇಕಾಗುವ ಸಾಮಗ್ರಿಗಳು

- 250 ಗ್ರಾಂ ಕಡ್ಲೇಕಾಯಿ
- 1 - 2 ಟೀ ಚಮಚ ಅಚ್ಚ ಕಾರದ ಪುಡಿ
- 2 - 4 ಟೀ ಚಮಚ ಬೆಳ್ಳುಳ್ಳಿ ಪುಡಿ/ಹರಳು
- 2 - 4 ಟೀ ಚಮಚ ಅಮಚೂರ್ ಪುಡಿ
- 1/4 ಟೀ ಚಮಚ ಉಪ್ಪು

### ಮಾಡುವ ವಿಧಾನ

ಕಡ್ಲೇಕಾಯಿ ಬೀಜವನ್ನು ಸಣ್ಣ ಉರಿಯಲ್ಲಿ ಎಣ್ಣೆ ಹಾಕದೆ ಹುರಿಯಿರಿ. ಮೇಲೆ ಹೇಳಿದ ಎಲ್ಲ ಸಾಮಗ್ರಿಗಳೊಂದಿಗೆ ಸೇರಿಸಿ ಪುಡಿ ಮಾಡಿ, ಒಂದು ಡಬ್ಬಿಯಲ್ಲಿ ಹಾಕಿ ಬಿಗಿಯಾಗಿ ಮುಚ್ಚಿ ರೆಫ್ರಿಜರೇಟರ್ ನಲ್ಲಿಟ್ಟರೆ 6 ತಿಂಗಳುಗಳ ಕಾಲ ಚೆನ್ನಾಗಿರುತ್ತದೆ.

- ಈ ಚಟ್ನಿಪುಡಿಯನ್ನು ಎಣ್ಣೆ ಅಥವಾ ಮೊಸರಿನಲ್ಲಿ ಕಲಸಿ; ರೊಟ್ಟಿ, ಚಪಾತಿ, ದೋಸೆಯೊಂದಿಗೆ ಸೇವಿಸಬಹುದು.
- ಪಲ್ಯಗಳ ಮೇಲೆ ಉದುರಿಸಬಹುದು.
- ಈ ಚಟ್ನಿಪುಡಿ ಹಾಕಿ ಮಾಡಿದ ಚಪಾತಿ ಬಲು ರುಚಿ.

ಕೊನೆಮಾತು: ಕಲಬೆರಕೆ ಮಾಡಿದ ಕಡ್ಲೇಕಾಯಿ ಎಣ್ಣೆಯನ್ನು ಕೊಳ್ಳಬೇಡಿ. ಕರಿದ ತಿನಿಸುಗಳನ್ನು ವಿಶೇಷ ಸಮಾರಂಭಗಳಲ್ಲಿ ಮಾತ್ರ ಬಳಸಿ. ಪ್ರತಿದಿನ 25 – 30 ಗ್ರಾಮ್ ಕಡ್ಲೇಕಾಯಿ ಸೇವಿಸಿ.

"ನೀವು ನಿಮ್ಮ ದೇಹವನ್ನು ಚೆನ್ನಾಗಿ ಪೋಷಿಸದಿದ್ದರೆ ನೀವೆಲ್ಲಿ ಇರಬಲ್ಲಿರಿ"? ▪

---

Reference 1.

Kris-Etherton et.al. High-monounsaturated fatty acid diets lower both plasma cholesterol and triacylglycerol concentrations. Am J Clin Nutr 1999; 70:1009-15

Reference 2.

Shantha, T., and Sreenivasamurthy, V .1975. Detoxification of ground nut oil. Journal of Food Science and Technology 12:20-22.

Shantha, T., and Sreenivasamurthy, V. 1977. Photodestruction of aflatoxin in groundnut oil. Indian Journal of Technology 15:453-454.

Shantha, T., and Sreenivasamurthy, V. 1980. Storage of groundnut oil detoxified by exposure to sunlight. Indian Journal of Technology 18(8):346-347.

## ವಿಚಾರ ವಿಹಾರ

ಮಾಲು, ಅಡಿಲೈಡ್

### ದೂರದೃಷ್ಟಿ

ಇದು ಒಂದು ಪಂಚತಂತ್ರದ ಕಥೆ. ಜಿ.ಪಿ. ರಾಜರತ್ನಂ ರವರ ವಿಚಾರ ರಶ್ಮಿಯಿಂದ ಆಯ್ದದ್ದು.

ಒಂದು ಹೊಳೆ. ಅದರಲ್ಲಿ ಮೂರು ಮೀನುಗಳಿದ್ದವು. ಒಂದರ ಹೆಸರು ಅನಾಗತಭಯ, ಇನ್ನೊಂದು ಪ್ರತ್ಯುತ್ಪನ್ನಮತಿ ಮತ್ತು ಮೂರನೆಯದು ಯದ್ಭವಿಷ್ಯ.

'ಮುಂದೆ ಹೀಗಾಗಲು ಸಾಧ್ಯವಿದೆ ಅಲ್ಲವೇ? ಅದನ್ನು ಹೀಗೆ ಪರಿಹರಿಸಿಕೊಳ್ಳಬಹುದಲ್ಲವೆ?' ಎಂಬುದಾಗಿ ಮುಂದಾಲೋಚನೆಯನ್ನು ಮಾಡಿಕೊಂಡು, ಇನ್ನೂ ಸಂಭವಿಸದಿರುವ ಭಯವನ್ನು ನಿವಾರಿಸಲು ಯತ್ನಿಸುತ್ತಿತ್ತು, ಮೊದಲನೆಯ ಮೀನು.

'ವಿಪ್ಪತ್ತು ಬಂದಾಗ ನೋಡಿಕೊಳ್ಳೋಣ, ಆ ಹೊತ್ತಿಗೆ ಏನು ತೋಚುತ್ತದೋ ಅದನ್ನು ಮಾಡೋಣ. ಇನ್ನೂ ಬಾರದಿರುವ ಭಯಕ್ಕೆ ಈಗಿನಿಂದ ಒದ್ದಾಡಿಕೊಳ್ಳುವುದೇಕೆ?' ಎಂಬ ನಂಬಿಕೆಯಿಂದ ಕಾರ್ಯನಿರ್ವಹಿಸುತಿತ್ತು, ಎರಡನೆಯ ಮೀನು.

'ಹಣೆಯಲ್ಲಿ ಬರೆದದ್ದು ಆಗುತ್ತದೆ, ಅದನ್ನು ತಪ್ಪಿಸಲು ಯಾರಿಗೂ ಸಾಧ್ಯವಿಲ್ಲ. ಹೀಗಿರುವಾಗ ಮುಂಜಾಗ್ರತೆ ತೆಗೆದುಕೊಂಡರೆ ಏನು ಪ್ರಯೋಜನ?! ಬಂದ ಭಯದಿಂದ ಪಾರಾಗಲು ಪ್ರಯತ್ನಿಸಿದರೆ ಏನು ಉಪಯೋಗ? ಎಂಬ ನಂಬಿಕೆ ಇಂದ ಜೀವಿಸುತ್ತಿತ್ತು ಮೂರನೆಯ ಮೀನು.

ಒಂದು ಸಲ ಯಾರೋ ಬೆಸ್ತರು ಬಲೆ ಹಿಡಿದು ಹೊಳೆಯ ದಡದಲ್ಲಿ ಸುಳಿದಾಡುವುದನ್ನು ಈ ಮೂರು ಮೀನುಗಳು ನೋಡಿದವು.

' ಈ ದಿನ ಬಂದಿದ್ದಾರೆ, ನಾಳೆ ಬಲೆ ಬೀಸಬಹುದು, ಬಲೆಗೆ ಬೀಳುವ ಅಪಾಯವನ್ನು ತಪ್ಪಿಸಿಕೊಳ್ಳಬೇಕಾದರೆ, ನಾನು ಈಗಲೇ ಇಲ್ಲಿಂದ ಪಾರಾಗಬೇಕು' ಎಂದು ಅನಾಗತಭಯ ಮೀನು ಆ ಹೊಳೆಯಿಂದ ಬೇರೆಕಡೆ ಹೊರಟು ಹೋಯಿತು. ಜೀವವನ್ನು ಉಳಿಸಿಕೊಂಡಿತು.

ಮಾರನೆಯ ದಿನ ಬೆಸ್ತರು ಬಂದರು, ಬಲೆ ಬೀಸಿದರು. ಮಿಕ್ಕ ಎರಡು ಮೀನುಗಳು ಆ ಬಲೆಯಲ್ಲಿ ಸಿಕ್ಕಿಕೊಂಡವು. 'ಓಹೋ! ಈ ಬೆಸ್ತರು ಬಲೆ ಎಳೆದುಕೊಳ್ಳುವಷ್ಟರಲ್ಲಿ ನಾನು ತಪ್ಪಿಸಿಕೊಳ್ಳಬೇಕು' ಎಂದು ಎರಡನೇ ಮೀನು ಪ್ರತ್ಯುತ್ಪನ್ನಮತಿ ಯಾವುದೋ ಮಾಯದಲ್ಲಿ ಅಲ್ಲಿಂದ ತಪ್ಪಿಸಿಕೊಂಡಿತು. ದೈವವಶಾತ್ ಬದುಕುಳಿಯಿತು.

'ಆಗಬೇಕಾದ್ದನ್ನು ತಪ್ಪಿಸಲು ಯಾರಿಂದ ಸಾಧ್ಯ? ಎಲ್ಲ ನನ್ನ ಹಣೆ ಬರಹ' ಎಂದು ಯದ್ಭವಿಷ್ಯ ಅಂದುಕೊಳ್ಳುತ್ತಿರುವಾಗಲೇ ಬೆಸ್ತರು ಬಲೆಯನ್ನು ಎಳೆದಿದ್ದರು. ಅದು ಅಂದು ಸಂಜೆ ಬೆಸ್ತರ ಬಾಯಿಗೆ ಆಹಾರವಾಯಿತು.

ಮನುಷ್ಯರಲ್ಲೂ ಕೂಡ ಈ ಮೂರು ಮೀನುಗಳ ಸ್ವಭಾವದವರು ಇರುತ್ತಾರೆ. ದುರಾದೃಷ್ಟವಶಾತ್ ಇವರಲ್ಲಿ ಯದ್ಭವಿಷ್ಯರೇ ಹೆಚ್ಚು. ಪತ್ಯುತ್ಪನ್ನಮತಿಗಳು ವಿರಳ. ಅನಾಗತಭಯ ವ್ಯಕ್ತಿಗಳು ಬೆರಳೆಣಿಕೆ.

ನಾವು ಆ ದೂರದೃಷ್ಟಿ ಇರುವ ಅನಾಗತಭಯದ ಗುಣಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು, ಮುಂಬರುವ ಕಷ್ಟಗಳನ್ನು ಈಗಲೇ ನಿವಾರಿಸಿಕೊಳ್ಳುವ. ▪





# ರಾಂ ರಾಮ

**ಇದು ಹಾಸ್ಯ ಪುಟ**



ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

**ನೀವು ಕೇಳಿದಿರಿ**

## ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

## ಹ್ಯಾಟ್ಸ್ ಆಫ್ ಸೀನೂ...

ಕಾರ್ಮಿಕರ ದಿನಾಚರಣೆಯ ಅಂಗವಾಗಿ ಭಾಷಣ ರೆಡಿ ಮಾಡಿಕೊಳ್ಳಬೇಕಾಗಿತ್ತು. ಸ್ಟೆನೋ ಸೀನುವನ್ನು ಒಳಕರೆದೆ.

'ಟೇಕ್ ಡೌನ್ ಸೀನೂ. ನನ್ನ ನೆಚ್ಚಿನ ಕಾರ್ಮಿಕರೇ...' ಎಂದು ಆರಂಭಿಸಿದೆ.

'ಕಾರ್ಮಿಕರೇ ಈಸ್ ನಾಟ್ ರೈಟು ಸರ್' ಎಂದ ಸೀನು.

'ವೈ?'

'ಕಾರ್ ನಲ್ಲಿ ಓಡಾಡೋ ಮಿಕಕ್ಕೆ ಕಾರ್ಮಿಕ ಅಂತಾರೆ ಸರ್'

'ಮತ್ತೆ ನೀವೆಲ್ಲ?'

'ಡಿಪೆಂಡಿಂಗ್ ಆನ್ ದಿ ಮೋಡು ಆಫ್ ಟ್ರಾನ್ಸ್ ಪೋರ್ಟು, ಬಸ್ಮಿಕ, ಟ್ರೈನ್ಮಿಕ, & ಸ್ಕೂಟರ್ಮಿಕಾಸ್. ಬಟ್ ಮೋಸ್ಟ್ ಆಫ್ ಅಸ್ ಆರ್ ಬೈಕ್ಮಿಕಾಸ್'

'ಓ.ಕೆ. ಹಾಗಿದ್ದರೆ ನನ್ನ ನೆಚ್ಚಿನ ನೌಕರರೇ ಅಂತ ಬರ್ಕೋ'

'ನೌ ಅಂದ್ರೆ ಪೇಯ್ನ್ ಅಲ್ವಾ ಸಾರ್, ಕರ ಅಂದ್ರೆ ಟ್ಯಾಕ್ಸ್! ಸೋ ನೌಕರ ಆಲ್ಸೋ ಈಸ್ ನಾಟ್ ಎ ಗುಡ್ ವರ್ಡ್ ಸರ್'

'ಸೀನೂ... ಹೇಳಿದ್ದಕ್ಕೆಲ್ಲ ಒಂಟಿ ಸೀನು ಸೀನಬೇಡ. ಸರಿ. ನನ್ನ ನೆಚ್ಚಿನ ಸಹೋದ್ಯೋಗಿಗಳೇ ಅಂತ ಬರ್ಕೋ...'

'ಡಬಲ್ ಆಬ್ಜೆಕ್ಷನ್ ಸರ್'

'ಏನೋ?'

'ಸಹ+ಉದ್ಯೋಗಿ = ಸಹೋದ್ಯೋಗಿ. ಸಹಿಸಿಕೊಂಡು - ಅಂದರೆ, ನಿಮ್ಮನ್ನು ಸಹಿಸಿಕೊಂಡು, ಉದ್ಯೋಗ ಮಾಡುವವರು ಮಾತ್ರ ಸಹೋದ್ಯೋಗಿಗಳು. ದೇರ್ ಆರ್ ಮೆನಿ ಹೂ ಡು ನಾಟ್ ಅಗ್ರೀ ವಿತ್ ಯೂ ಸರ್'

'ಇನ್ನೊಂದು ಆಬ್ಜೆಕ್ಷನ್ ಏನು?'

'ಉದ್ಯೋಗ ಅಂದ್ರೆ ಉದ್ದಿನ ವಡೆ ತಿನ್ನೋ ಯೋಗ ಅಂತ ಕೆಲವರ ಅಭಿಪ್ರಾಯ ಸಾರ್. ಸಹೋದ್ಯೋಗ ಅಂದ್ರೆ ಇಡ್ಲಿ, ವಡೆ ತಿನ್ನೋದು ಅಂತ. ಕೆಲವರು ಉಪ್ಪಿಟ್ಟು, ದೋಸಾ ತಿನ್ನೋವ್ರು ಇದ್ದಾರೆ'

'ದಟ್ ಈಸ್ ಎ ಸ್ಟುಪಿಡ್ ಇಂಟರ್ಪ್ರಿಟೇಶನ್ ಸೀನು'

'ಒಪ್ಪಿದೆ ಸರ್. ಆದರೆ ಸಮ್ ಪೀಪಲ್ ಪ್ರಿಫರ್ ಟು ಬಿ ಸ್ಟುಪಿಡ್'

'ಆಲ್ ರೈಟ್; ನನ್ನ ಮೆಚ್ಚಿನ ಸಹೋದರ ಸಹೋದರಿಯರೆ ಅಂತ ಶುರು ಮಾಡಿದರೆ?'

'ಸ್ವಜನ ಪಕ್ಷಪಾತ, ನೆಪೋಟಿಸಂ, ಅಂತ ನಿಮ್ಮ ಮೇಲೆ ಕೇಸ್ ಹಾಕಬಹುದು ಸರ್'

'ಅಸೋಸಿಯೇಟ್ಸ್ ಅಂದರೆ ಹೇಗೆ?'

'ಅನ್ನಿ. ಲಾಭದಲ್ಲಿ ಪಾಲು ಕೇಳ್ತಾರೆ, ಕೊಡಿ.'

'ಸೀನೂ, ಐ ಗಿವ್ ಅಪ್. ನೀನೇ ಹೇಳಿಬಿಡು'

'ಮೈ ಕೊಲೀಗ್ಸ್ ಅಂದ್ಬಿಡಿ ಸರ್'

'ನನ್ನ ಕೈಕೆಳಗಿನವರು ಕೊಲೀಗ್ಸ್ ಹೇಗೆ ಆಗ್ತಾರೆ?'

'ಆಗ್ತಾರೆ'

'ಪ್ಲೀಸ್ ಎಕ್ಸ್ ಪ್ಲೇಯ್ನ್'

'ನೀವು ಇಂಡಿಯನ್ ಪ್ರೀಮಿಯರ್ ಲೀಗ್, ಇಂಡಿಯನ್ ಪೊಲಿಟಿಕಲ್ ಲೀಗ್, ಪ್ರೀಮಿಯರ್ ಲೀಗ್ ಫುಟ್ಬಾಲ್ ನೋಡೋ ಟೈಮಲ್ಲೇ ಅವರೂ ಅವುಗಳನ್ನ ನೋಡ್ತಾರೆ. ಆದ್ದರಿಂದ ನೀವು ಕೊಲೀಗ್ಸ್'

'ಮೆಚ್ಚಿದೆ ಸೀನು. ಟೇಕ್ ಡೌನ್. ಮೈ ಡಿಯರ್ ಕೊಲೀಗ್ಸ್...'

'ಡಿಯರ್ ಬೇಡ ಸರ್'

'ಯಾಕೆ?'

### ಸುಮ್ಮ ನಕ್ಕಿಡಿ




Credits: You Said It, RK Laxman

ಬೆಲೆ ಹೆಚ್ಚು ಮಾಡಬಾರದು ಅಂದ್ರೆ ನಮ್ಮ ಸೋಪ್ ಗಾತ್ರ ಇಷ್ಟು ಮಾಡಬಹುದು !

ಮುಂದಿನ ಪುಟ ನೋಡಿ ...

‘ನಿಮ್ಮ ಲೇಡಿ ಸೆಕ್ರೆಟರಿ ಬಿಟ್ಟು ನಿಮಗೆ ಯಾರೂ ಡಿಯರ್ ಇಲ್ಲ ಸರ್’

‘ಹುಷ್ ಸೀನು! ನಾಟ್ ಸೋ ಲೌಡ್’

‘ಬಟ್ ದ ಹೋಲ್ ಆಫೀಸ್ ನೋಸ್ ಯೂ ಹ್ಯಾವ್ ಲವ್ಡ್!’

ಒಂದು ಕ್ಷಣ ತಲೆ ಧಿಂ ಎಂದಿತು. ಸಂಭಾಳಿಸಿಕೊಳ್ಳುತ್ತಾ ‘ಇಟ್ ಈಸ್ ಪೆಟರ್ನಲ್ ಸೀನೂ’ ಅಂದೆ.

‘ಆದರೆ ಆಫೀಸಲ್ಲಿ ಅದು ಎಟರ್ನಲ್ ಅನ್ನುತ್ತಿದ್ದಾರೆ’ ತಿರುಗೇಟು ಕೊಟ್ಟ ಸೀನು.

‘ಓಕೆ. ಡಿಯರ್ ಅನ್ನೋ ಪದ ಕೈಬಿಡು. ಮೈ ಕೊಲೀಗ್ಸ್ ಅಂತಾನೇ ಇಟ್ಕೋ..’

‘ಮುಂದೆ?’

‘ಮೈ ಕೊಲೀಗ್ಸ್, ಆನ್ ದಿಸ್ ಆಸ್ಪಿಷಸ್ ಅಕೇಶನ್...’

‘ಆಸ್ಪಿಷಸ್ ಬೇಡ ಸರ್’

‘ಯಾಕೆ?’

‘ಅವರು ಕೇಳಿದ್ದನ್ನ ನೀವು ಕೊಟ್ರೆ ಅದು ನಿಮಗೆ ಆಸ್ಪಿಷಸ್ ಅಲ್ಲ. ಕೊಡದೆ ಇದ್ದರೆ ಅವರಿಗೆ ಆಸ್ಪಿಷಸ್ ಅಲ್ಲ.’

‘ಮತ್ತೆ?’

‘ಆನ್ ದಿಸ್ ಅಕೇಶನ್ ಅಷ್ಟೇ ಸಾಕು. ನೆಕ್ಸ್ಟ್ ಹೇಳಿ’

‘ಅದನ್ನೇ ಕನ್ನಡದಲ್ಲಿ ಹೇಳಿದರೆ?’

‘ಹೇಗೆ?’

‘ಇವತ್ತು, ಈ ದಿನ, ಈ ಸಂದರ್ಭದಲ್ಲಿ...’

‘ಹಚ್.ಡಿ.ಕುಮಾರಸ್ವಾಮಿ ಮಾಡ್ತಿರೋ ಜೆಡಿಎಸ್ ಪಾರ್ಟಿ ಸ್ಪೀಚ್ ಅನ್ನೋತಾರೆ ಸರ್. ಇಲ್ಲಿಯವರೆಗೆ ಇಂಗ್ಲಿಷೇ ಸರಿ ಸರ್’

ಸೀನುವೇ ಹೀಗೆ. ಅವನಿಗೆ ಒಂದು ಡಿಕ್ಟೇಶನ್ ಕೊಡುವಷ್ಟು ಸಮಯದಲ್ಲಿ ನಾಲ್ಕು ಇಂಪ್ರಾಪ್ಟು ಸ್ಪೀಚ್ ಮುಗಿಸಬಹುದು. ಆದರೆ ಮೇ ಫಸ್ಟೂ ಈಸ್ ಡಿಫರೆಂಟೂ. ಕಾರ್ಮಿಕರ ಮುಂದೆ ಬಾಸ್ ಆದ ನಾನು ಪ್ರತಿ ಅಕ್ಷರಾನೂ ತೂಗಿ ನೋಡಿ ಆಡಬೇಕು. ಒಂದು ಸರತಿ, ಎಲ್ಲ ಕಾರ್ಮಿಕರೂ ಸೇರಿದ್ದ ಸಭೆಯನ್ನುದ್ದೇಶಿಸಿ ‘ಐ ಆಮ್ ಹ್ಯಾಪಿ ಟು ಸೀ ಯೂ ಆಲ್ ಹಿಯರ್’ ಅಂದೆ. ಮಾರನೆಯ ದಿನ ಆಫೀಸ್ ಟೈಮ್ ಆದರೂ ಯಾರೂ ಬಂದಿರಲಿಲ್ಲ.

‘ಸೀನೂ, ವೇರ್ ಆರ್ ದ ವರ್ಕರ್ಸ್ ?’ ಅಂದೆ.

‘ಆಡಿಟೋರಿಯಮ್ಮಲ್ಲಿ ಸರ್’

‘ಯಾಕೆ?’

‘ನಿನ್ನೆ ನೀವೇ ಅವರಿಗೆಲ್ಲ ಹ್ಯಾಪಿ ಟು ಸೀ ಯೂ ಆಲ್ ಹಿಯರ್ ಅಂದ್ರಲ್ಲಾ, ಅದಕ್ಕೇ thereಏ ಇದ್ದಾರೆ!’

ನನ್ನ ಮಾತಿನಿಂದ ಹೀಗೂ ಎಡವಟ್ಟು ಆಗಬಹುದೆಂದು ಹೊಳೆದದ್ದೇ ಆಗ. ಆ ತಂಡದ ಮುಖಂಡರನ್ನು ಕರೆದು ಸರಿಯಾಗಿ ಛೀಮಾರಿ ಹಾಕಿದೆ.

ಪರಿಣಾಮ?

ಮರುದಿನ ನನ್ನ ಚೇಂಬರಲ್ಲಿ ಕುಳಿತಿರುವಾಗ ಫೋನ್ ಟ್ರಿನ್ ಗುಟ್ಟಿತು. ರಿಸೀವಿಸಿದೆ.

“ಏಯ್! ಗೇಟ್ ತೆಗೆಯೋ. ಹಾರನ್ ಹೊಡೀತಾ ಇರೋದು ಕೇಳ್ಸಲ್ವಾ...’ ಎಂದಿತು ಆ ತುದಿಯ ದನಿ.

‘ಹೂ ಈಸ್ ದಿಸ್ ಐ ಸೇ? ಡೋಂಟ್ ಯೂ ನೋ ಹೂ ಯು ಆರ್ ಸ್ಪೀಕಿಂಗ್ ಟು?’ ಎಂದೆ ಗಡಸು ದನಿಯಲ್ಲಿ.

‘ಸೆಕ್ಯುರಿಟಿಗೇ ಇಷ್ಟು ಅಹಂಕಾರ ಇದ್ರೆ ಇನ್ನು ನಿಮ್ಮ ಬಾಸ್ ನ ದೇವ್ರೇ ಕಾಪಾಡ್ಬೇಕು’ ಎಂದಿತು ಆ ದನಿ.

ಸಂಥಿಂಗ್ ರಾಂಗ್ ಸಂವೇರ್ ಅನಿಸಿತು.

ಅಷ್ಟರಲ್ಲಿ ಬಾಗಿಲ ಬಳಿ ಸೆಕ್ಯುರಿಟಿ ಹೆಡ್ ಕಾಣಿಸಿಕೊಂಡ. ಮುಖದಲ್ಲಿ ಗಲಿಬಿಲಿ!

‘ಏನಾಯ್ತು ದ್ವಾರ್ ಕಾ ನಾಥ್?’

‘ಯಾರೋ ಯವ್ವ ಫೋನ್ ಅಚ್ಚೆ ‘ಸಾರ್, ಡಿಟುಕೇಚನಿಗೆ ಒಳಗೆ ಬರ್ಲಾ ಸಾರ್’ ಅಂತು ಸಾರು. ನನ್ನ ದನಿ ಕೇಳಿ ಫೋನ್ ಕುಕ್ತು. ಮತ್ತೆ ಫೋನ್ ಟ್ರಿಣ್ ಅತ್ತು. ಎತ್ತಿದ್ರೆ ‘ಸರ್, ನನ್ನ ಚೆಕ್ ಯಾವಾಗ ಕಲೇಟು ಮಾಡ್ತಿ’ ಅಂತು ಸರ್. ಏನೇನೋ ಆಯ್ತಾ ಅದೆ ಸಾರು’ ಎಂದು ತೇಲುಗಣ್ಣು ಮೇಲುಗಣ್ಣು ಮಾಡಿದ.

ಏನಾಗಿದೆ ನೋಡೋಣ ಎಂದು ಸೆಕ್ಯುರಿಟಿ ಕ್ಯಾಬಿನ್ ಕಡೆ ನಡೆದೆ. ನನ್ನ ಚೇಂಬರ್ ಗೂ, ಆ ಕ್ಯಾಬಿನ್ ಗೂ ಮಧ್ಯೆ ಎರಡು ಬೃಹತ್ ಮರಗಳಿವೆ. ಅವುಗಳ ಕೆಳಗೆ ಒಂದು ಕ್ಷಣ ನಿಂತೆ. ಮರದ ಮೇಲಿಂದ ಫೋನ್ ಟ್ರಿಣ್ ಗುಟ್ಟುವ ಸದ್ದು!

ತಲೆಯೆತ್ತಿ ನೋಡಿದೆ. ಮರದ ಕೊಂಬೆಗಳಿಂದ ಫೋನ್ ಗಳು ನೇತಾಡುತ್ತಿವೆ. ಯಾವಯಾವುದೋ ಡಿಪಾರ್ಟ್ ಮೆಂಟ್ ನ ಫೋನುಗಳೆಲ್ಲಾ ಮರದ ಮೇಲೆ!

ಅರ್ಥವಾಯಿತು!

ಮುಂದಿನ ಪುಟ ನೋಡಿ ...

ನನ್ನ ಚೇಂಬರ್ನ ಫೋನ್ ಮತ್ತು ಸೆಕ್ಯುರಿಟಿ ಚೇಂಬರ್ನ ಫೋನ್ ಕನೆಕ್ಷನ್ ಗಳನ್ನು ಅದಲುಬದಲು ಮಾಡಿಬಿಟ್ಟಿದ್ದರು!

ಮಿಕ್ಕೆಲ್ಲ ವಿಭಾಗಗಳ ಫೋನ್ ಗಳನ್ನು ಮರಕ್ಕೇರಿಸಿದ್ದರು!!!

ಮಧ್ಯಾಹ್ನವೇ ಒಂದು ಮೀಟಿಂಗ್ ಕರೆದು, ಮುಖಂಡರಿಗೆ ಲಂಚ್ ತರಿಸಿಕೊಟ್ಟು, ಒಂದೊಂದು ಭರ್ಜರಿ ಸೂಟ್ ಪೀಸ್ ಗಿಫ್ಟ್ ಕೊಟ್ಟೆ.

ಅರ್ಧಗಂಟೆಯಲ್ಲಿ ಅಲ್ಲಲ್ಲಿಯ ಫೋನ್ ಗಳು ಅಲ್ಲಲ್ಲಿಗೆ ಸೇರಿದ್ದವು.

ಅಂದಿನಿಂದ ನನ್ನವು ಬರೀ ಗಿಲೀಟಿನ ಮಾತುಗಳೇ. ಸೀನುವೇ ಗಿಲೀಟಿನ ಗುರು.

'ಸೀನು, ನಾಳೆಯೇ ಸ್ಪೀಚ್. ಏನು ಹೇಳಬೇಕೆಂದು ನೀನೇ ಬರೆದುಕೊಟ್ಟುಬಿಡು' ಎಂದೆ.

'ಒನ್ ಸ್ಮಾಲ್ ಸಜೆಷನ್ ಸರ್'

'ಏನು?'

'ನೀವು ಗಾಂಧಿಯೂ ಅಲ್ಲ, ಮಾರ್ಟಿನ್ ಲೂಥರ್ ಕಿಂಗೂ ಅಲ್ಲ, ಮೋದಿಯೂ ಅಲ್ಲ, ಒಬಾಮಾನೂ ಅಲ್ಲ'

'ಹೌದು. ಆದರೆ ಅದಕ್ಕೂ ಇದಕ್ಕೂ ಏನು ಸಂಬಂಧ?'

'ನಿಮ್ಮ ಸ್ಪೀಚ್ ಕೇಳಕ್ಕೆ ಯಾರು ಕಾದಿದಾರೇಂತ ನೀವು ಮಾತನಾಡಬೇಕು?'

ಹೌದಲ್ಲವೇ!

ನನ್ನ ಜ್ಞಾನೋದಯಕ್ಕೆ ಸೀನುವೇ ಬೋಧಿವೃಕ್ಷ!

'ಸೀನೂ...'

'ಏನೂ...?'

'ಈ ವರ್ಷ ಸ್ಪೀಚ್ ಮಾಡದಿರುವುದೇ ಕಾರ್ಮಿಕರಿಗೆ ನನ್ನ ಕಡೆಯಿಂದ ದೊರೆಯುವ ದೊಡ್ಡ ಗಿಫ್ಟ್ ಅಂತ ಹೇಳಿಬಿಡು'

'ನೆನ್ನೆಯೇ ಎಲ್ಲರಿಗೂ ಹೇಳಿದೆ ಸರ್!'

'ನೆನ್ನೆಯೇ ನಿನಗೆ ಹೇಗೆ ತಿಳಿದಿತ್ತು?'

'ನಾನು ಒಪ್ಪಿಕೊಂಡ ಕೆಲಸ ಯಾವತ್ತಾದರೂ ಮಾಡದೇ ಇದ್ದೀನಾ ಸಾರ್?'

'ಇಲ್ಲ. ಯೂ ಹ್ಯಾವ್ ಆಲ್ವೇಸ್ ಬೀನ್ ಎಫಿಷಿಯಂಟ್. ಹೇಳಿದ್ದನ್ನ ಮಾಡಿದ್ದೀಯ.'

'ಕಾರ್ಮಿಕರಿಗೆ ನಿಮ್ಮ ಭಾಷಣದ ಬೋರ್ ಅನ್ನ ತಪ್ಪಿಸ್ತೀನಿ ಅಂತ ಮಾತು ಕೊಟ್ಟಿದ್ದೆ ಸರ್''

'ಹ್ಯಾಟ್ಸ್ ಆಫ್ ಸೀನು. ಥ್ಯಾಂಕ್ಸ್' ಎನ್ನುತ್ತಾ ಗಾಲ್ಫ್ ಕ್ಲಬ್ ಕೈಲಿ ತಿರುಗಿಸುತ್ತಾ ಆಫೀಸಿನಿಂದ ಹೊರಬಿದ್ದೆ. ▪

---

## ಕನ್ನಡದಲ್ಲಿ ಟೈಪ್ ಮಾಡೋದು ಹೇಗೆ

ಹೊರನಾಡ ಚಿಲುಮೆ - ಸೆಪ್ಟೆಂಬರ್ ೨೦೧೩ ರ ಸಂಚಿಕೆಯಲ್ಲಿ google input tools ಉಪಯೋಗಿಸಿ ಕನ್ನಡದಲ್ಲಿ ಹೇಗೆ ಟೈಪ್ ಮಾಡಬಹುದು ಎಂದು ತಿಳಿದು ಕೊಂಡಿರಿ.

ಪೂರ್ಣ ಮಾಹಿತಿಗೆ ಸೆಪ್ಟೆಂಬರ್ ೨೦೧೩ ರ ಸಂಚಿಕೆಯನ್ನು ನೋಡಲು ಈ ಲಿಂಕ್ ಕ್ಲಿಕ್ ಮಾಡಿ.

**ಸಂಕ್ಷಿಪ್ತ ಮಾಹಿತಿ ಇಲ್ಲಿದೆ**

ಗೂಗಲ್ ಇನ್ಪುಟ್ ಟೂಲ್ಸ್ (Google input tools) ಯೂನಿಕೋಡ್ ಆಧಾರಿತ ಒಂದ ತಂತ್ರಾಂಶ. ಇದನ್ನು ನಿಮ್ಮ ಕಂಪ್ಯೂಟರ್ ನಲ್ಲಿ install ಮಾಡಿದರೆ ಕನ್ನಡದಲ್ಲಿ ನೀವು ನೇರವಾಗಿ word, excel ಇತ್ಯಾದಿ office ಸಾಫ್ಟ್ವೇರ್ ಅಲ್ಲದೆ, ಸಮಾಜ ತಾಣಗಳಾದ ಫೇಸ್ಬುಕ್ , ಜಿ-ಪ್ಲಸ್ ಇತ್ಯಾದಿಗಳಲ್ಲೂ ಟೈಪ್ ಮಾಡಬಹುದು.

**INSTALL ಮಾಡುವ ಮತ್ತು ಉಪಯೋಗಿಸುವ ವಿಧಾನ**

1. http://www.google.com/inputtools/windows/index.html - ಈ ಲಿಂಕ್ ಕ್ಲಿಕ್ ಮಾಡಿ

ಇರುವ ಹಲವಾರು ಭಾಷೆಗಳ ಲಿಸ್ಟ್ ನಲ್ಲಿ ಕನ್ನಡ ಕ್ಲಿಕ್ ಮಾಡಿ install ಮಾಡಿ.

ಆಂಗ್ಲ ಭಾಷೆಯಲ್ಲಿ ಟೈಪ್ ಮಾಡುತ್ತಿದ್ದಾಗ ಕನ್ನಡ ಟೈಪ್ ಮಾಡಲು ಒಟ್ಟಿಗೆ CTRL + G ಕೀ ಒತ್ತಿ. ಆಗ ಆಂಗ್ಲದಿಂದ ಕನ್ನಡಕ್ಕೆ ಕೀಲಿಮಣೆ ಸಿದ್ಧವಾಗುತ್ತದೆ. ನಂತರ ನೀವು ಮತ್ತೆ ಆಂಗ್ಲ ಪದ ಬಳಸಬೇಕಾದರೆ ಮತ್ತೆ CTRL + G ಕೀ ಒಟ್ಟಿಗೆ ಒತ್ತಿ.

ಸೂಚನೆ: ಕೆಲವೊಮ್ಮೆ ಈ ಬಾಕ್ಸ್ ಕಾಣಿಸದಿದ್ದರೆ ಒಟ್ಟಿಗೆ ALT + SHIFT ಕೀ ಒತ್ತಿ


**ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: horanadachilume@gmail.com**

SRI KRISHNA TRAVEL
Travel with a Smile

Contact Mr Sudheendra Rao EMAIL
Mobile 0415 291 723

choice HOME LOANS

Contact Mr.Sathya Bhat EMAIL
Mobile 0412 918 511




Contact Mr Umesh EMAIL
Mobile 0401 034 456




Contact Mr Eranna Gotyal EMAIL
Mobile 0404 215 605

# ಆಳು



## ಕನಕಾಪುರ ನಾರಾಯಣ



ಹಿಂದೊಮ್ಮೆ ಆಫ್ರಿಕಾ ದೇಶದಲ್ಲಿ ಕಮೇರಾ ಎಂಬ ರಾಜ ದರ್ಪದಿಂದ ಆಳುತ್ತಿದ್ದ.ಆತನನ್ನು ಕಂಡರೆ ಪ್ರಜೆಗಳು ಹೆದರಿ ನಡುಗುತ್ತಿದ್ದರು.ಸಭೆಯಲ್ಲಿ ಎಲ್ಲರನ್ನೂ ಕರೆಸಿ "ಈ ನಾಡಿಗೆ ನಾನೇ ರಾಜ,ಎಲ್ಲರೂ ನನ್ನ ಆಳುಗಳು" ಎಂದು ಗರ್ವದಿಂದ ಘೋಷಿಸಿದ.ಅದೇ ವೇಳೆಗೆ ಒಬ್ಬ ಮುದುಕ ಅಲ್ಲಿಗೆ ಬಂದು"ಸಾಧ್ಯವಿಲ್ಲ, ಎಲ್ಲರೂ ಈ ಭೂಮಿಯಲ್ಲಿ ಆಳುಗಳೇ"ಎಂದ.ಅದನ್ನು ಕೇಳಿ ಕುಪಿತನಾದ ರಾಜ ಆತನನ್ನು ಹತ್ತಿರಕ್ಕೆ ಕರೆದು "ಎಷ್ಟು ಧೈರ್ಯ ನಿನಗೆ ಈ ಮಾತನ್ನು ಹೇಳಲು,ಯಾರುನೀನು?"ಎಂದು ಕೇಳಿದ.ಅದಕ್ಕೆ ಮುದುಕ "ಅಯ್ಯಾ ದೊರೆ,ಕುಡಿಯಲು ನೀರಿಲ್ಲದೆ ಬಳಲುತ್ತಿರುವ ಪಕ್ಕದ ಊರಿಂದ ಬಂದವನು ನಾನು,ಒಂದು ಬಾವಿಯನ್ನು ತೋಡಿಸಿಕೊಡಿ ಎಂದು ಬೇಡಲು ಬಂದಿರುವೆ"ಎಂದ.

"ಓಹೋ ಹಾಗಾದರೆ ನೀನೊಬ್ಬ ಭಿಕ್ಷುಕ!ನನ್ನನ್ನೂ ಆಳು ಎಂದ ನಿನಗದೆಷ್ಟು ಸೊಕ್ಕು"ಎಂದು ಗದರಿದ.ಅದಕ್ಕೆ ಮುದುಕ ಶಾಂತಿಯಿಂದ ಉತ್ತರಿಸಿದ "ದೊರೆ, ಬೇಕಿದ್ದರೆ ಸಾಯಂಕಾಲದ ಒಳಗೆ ಸಾಬೀತು ಮಾಡಿ ತೋರಿಸುತ್ತೇನೆ" ಎಂದ."ಸರಿ ನಿನ್ನ ಮಾತು ನಿಜವಾದರೆ ಬಾವಿಯನ್ನು ತೋಡಿಸಿ ಕೊಡುತ್ತೇನೆ"ಎಂದ.ತಕ್ಷಣ ಮುದುಕ ನಮ್ರತೆಯಿಂದ ತಲೆ ತಗ್ಗಿಸಿ ಕೈಯಲ್ಲಿದ್ದ ಊರುಗೋಲನ್ನು ರಾಜನಿಗೆ ಹಿಡಿಯಲು ಹೇಳಿ ಆತನ ಪಾದ ಸ್ಪರ್ಶಿಸಿ ನಮಸ್ಕರಿಸಿದ,ನಂತರ ತನ್ನ ಕೋಲನ್ನು ವಾಪಸ್ ಕೇಳಿ ಪಡೆದ."ಇನ್ನು ಇದಕ್ಕಿಂತಾ ಮತ್ತೇನು ಪುರಾವೆ ಬೇಕು ಪ್ರಭು?" ಎಂದ ಮುದುಕ."ಪುರಾವೆ?" ರಾಜ ಕಣ್ಣರಳಿಸಿ ಕೇಳಿದ.ನಾನು ಕೋಲನ್ನು ಹಿಡಿಯಲು ಹೇಳಿದಾಗ ನೀವು ಹಿಡಿದಿರಲಿಲ್ಲವೇ? ಮತ್ತೆ ಕೊಡಿ ಎಂದಾಗ ಕೊಡಲಿಲ್ಲವೇ? ನಾನು ಹೇಳಿದ್ದನು ನೀವು ಮಾಡಿದಿರಿ"ಎಂದ.ರಾಜನ ಮುಖ ಮುದುಡಿತು.ಮುದುಕನ ಊರಿನಲ್ಲಿ ಒಂದಲ್ಲ ಎರಡು ಬಾವಿ ತೋಡಿಸಿಕೊಟ್ಟ.ರಾಜನ ಅಟ್ಟಹಾಸವೂ ಅಡಗಿತು. ▪

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ



ಕನಕಾಪುರ ನಾರಾಯಣ
ಇವರ "ಚಕ್ಕೆ ಮೊಗ್ಗು"



ಸುದರ್ಶನ್. ಎನ್
ಇವರ "ಅನಿವಾಸಿ"



ಬದರಿ ತ್ಯಾಮಗೊಂಡ್ಲು
ಇವರ "ಕಾವ್ಯ ಕಸ್ತೂರಿ"



ಸ್ಮಿತಾ ಮೇಲ್ಕೋಟೆ
ಇವರ "ಮಂದಹಾಸ"



ಮಹಾಂತೇಶ್ ಸಿ.
ಇವರ "ಹಂಗ ಸುಮ್ನ್..."

## ಮೆಂತ್ಯದ ಸಾರು



**ಬೇಕಾಗುವ ಸಾಮಗ್ರಿಗಳು**

- ತೊಗರಿ ಬೇಳೆ ಕಾಲು ಕಿಲೋ, ನಾಲ್ಕು ಚಮಚ ಮೆಂತ್ಯ
- ನಿಂಬೆ ಗಾತ್ರ ಹುಣಸೇ ಹಣ್ಣು
- ಸಾರು ಅಥವಾ ಮೆಣಸಿನ ಪುಡಿ ಒಂದು ಚಮಚ, ರುಚಿಗೆ ತಕ್ಕ ಉಪ್ಪು
- ಕೊತ್ತಂಬರಿ ಸೊಪ್ಪು ಅರ್ಧ ಕಟ್ಟು
- ಒಗ್ಗರಣೆಗೆ ಇಂಗು,ಸಾಸಿವೆ,ಕರಿಬೇವಿನ ಎಲೆಗಳು ಒಂದು ಚಮಚ ತುಪ್ಪ

**ಮಾಡುವ ವಿಧಾನ**

- ತೊಗರಿ ಬೇಳೆ ಮತ್ತು ಮೆಂತ್ಯವನ್ನು ಪಾತ್ರೆಯೊಂದರಲ್ಲಿ ಅಥವಾ ಕುಕ್ಕರ್‌ನಲ್ಲಿ ಬೇಯಿಸಿಕೊಳ್ಳಿ
- ಬೆಂದ ನಂತರ ಒಲೆಯಮೇಲಿಟ್ಟು ಅದಕ್ಕೆ ಮೊದಲು ಉಪ್ಪು ನಂತರ ಮೆಣಸಿನ ಪುಡಿ ಹಾಕಿ ಕುದಿಸಿ
- ಹುಣಸೇ ರಸ ಬೆರೆಸಿ,ಕೊಚ್ಚಿದ ಕೊತ್ತಂಬರಿ ಹಾಕಿ.ತುಪ್ಪದ ಒಗ್ಗರಣೆ ಮಾಡಿ ಬೆರೆಸಿ ಕೆಳಗಿಳಿಸಿ

**ಇನ್ನೂ ನೂರಾರು ರೆಸಿಪ್ಪಿಗಳಿಗೆ www.sugamakannada.com ಗೆ ಭೇಟಿಕೊಡಿ.**

ರೆಸಿಪಿ ಕೊಡ್ತೀರಾ!

## ಒಂದರಲ್ಲೊಂದು ಒಗಟು

೧. ಅಕ್ಷರ ಮೂರು ಸೇರಿದರೊಂದು ಶಬ್ದವು ಮನುಜ ರೂಪ ತಾಳತ್ತೈತಿ
೨. ಮೊದಲೆರೆಡಕ್ಷರ ಗೌರವದಿಂದ ಬಾಳುವ ಅರ್ಥ ಹೇಳತ್ತೈತಿ
೩. ಮೊದಲಿನ ಅಕ್ಷರಕೆ ಕೊನೆಅಕ್ಷರ ಸೇರಿ ಕಣ್ಕೊಟ್ಟ ದೇವರು ಎನುತ್ತೈತಿ
೪. ಮೊದಲಕ್ಷರವ ಕೈಬಿಡೆ ಹೊಸ ಹೊಸದೆನಿಸತ್ತೈತಿ
೫. ಮೊದಲಿಗೆ ಕೊನೆ ಅಕ್ಷರ ಸೇರಿ ಅವ್ವನ ತಮ್ಮನಾಗುತ್ತೈತಿ

ಉತ್ತರಕ್ಕೆ ಪುಟ ೧೮ ನೋಡಿ

# ವಿಷಾದ ...

ಅಳಲು ಬಿಗಿದಿರಲು ಕೊರಳು
ಕೊಳಲ ಹೇಗೆ ನುಡಿಸಲಿ
ಕೊರಳ ಬಿಗಿದಿರಲು ಉರುಳು
ನಗುವ ಹೇಗೆ ಧರಿಸಲಿ

ಎರಡು ಕೈಯ ಕಟ್ಟಿ ಹಿಡಿಯೆ
ವೀಣೆ ಹೇಗೆ ಮಿಡಿಸಲಿ
ಹಲವು ಬಗೆಯ ನೋವು ಇರಲು
ಒಲವ ಹೇಗೆ ಬಡಿಸಲಿ

ಕಣ್ಣು ಕಾಣದವನಿಗೇಕೆ
ಎಣ್ಣೆ ದೀಪ ಹಚ್ಚಲಿ
ಸಣ್ಣತನವ ತೋರುವವಗೆ
ಹೊನ್ನ ಏಕೆ ಬಿಚ್ಚಲಿ

ಬೇರು ಇರದ ಗಿಡಕೆ ಈಗ
ನೀರನೇಕೆ ಹರಿಸಲಿ
ಮಾರುದೂರ ಇರುವ ಸಖಗೆ
ಸುಖವ ಹೇಗೆ ಸುರಿಸಲಿ

ಸೂರು ಇರದ ಮನೆಯ ಒಳಗೆ
ನೆರಳ ಹೇಗೆ ಬಯಸಲಿ
ಬೇರೆ ಇರುವೆನೆನುವವನೊಡನೆ
ಬಯಕೆ ಏಕೆ ಬೆರೆಸಲಿ



ಹೊಗೆಯ ಕಣ್ಣೆ ತೂರುವವಗೆ
ಸೊಗವನೇಕೆ ಹರಸಲಿ
ಹಗೆಯ ತೋರುವವನ ಬೆರೆತು
ಮಗುವ ಏಕೆ ಭರಿಸಲಿ

**ರಚನೆ: ಮಾಲು, ಅಡಿಲೇಡ್**

## ಹಾಸ್ಯ ಚಿಲುಮೆ

ನೆಹರು ಹುಚ್ಚಾಸ್ಪತ್ರೆಗೆ ಒಮ್ಮೆ ಭೇಟಿ ಕೊಟ್ರಂತೆ. ಬಾಗಿಲಿನಲ್ಲೇ ಒಬ್ಬಾತ ಅವರನ್ನು ನಿಲ್ಲಿಸಿ " ಯಾರು ನೀನು ? " ಅಂದ.

ಅದಕ್ಕೆ ಅವ " ನಾನು ಭಾರತದ ಪ್ರಧಾನಿ, ನೆಹರು "ಅಂದ .

ಹುಚ್ಚ ನಕ್ಕು " ನಾನೂ ಇಲ್ಲಿಗೆ ಬಂದಾಗ ಹೀಗೇ ಹೇಳ್ತಿದ್ದೆ,ಒಳಗೆ ಹೋಗು ಎಲ್ಲ ಸರಿ ಮಾಡ್ತಾರೆ, ಕರ್ಕೊಂಡು ಹೋಗ್ರಿ ಇವನನ್ನ "






ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ – ಸುಗಮ ಕನ್ನಡ ಕೂಟ

## ಜಾಣ ಕರ್ನಾಟಕ

೧. ಕನ್ನಡದ ಮೊದಲ ಸಮಾಚಾರ ಪತ್ರಿಕೆ ಯಾವುದು? ಇದನ್ನು ಹೊರತಂದವರು ಯಾರು? ಇದು ಹೊರಬಂದ ದಿನಾಂಕ ಯಾವುದು?

೨. ಕನ್ನಡದ ಮೊದಲ ಸಾಮಾಜಿಕ ಕಾದಂಬರಿ ಯಾವುದು? ಇದರ ಕರ್ತೃ ಯಾರು? ಇದು ಪ್ರಕಟಣೆಯಾದ ವರ್ಷ ಯಾವುದು?

ಸರಿ ಉತ್ತರಕ್ಕೆ ಪುಟ ೧೫ ನೋಡಿ

**ಒಂದರಲ್ಲೊಂದು ಒಗಟು – ಉತ್ತರ**

೧.ಮಾನವ ೨.ಮಾನ ೩.ಮಾವ ೪. ನವ ೫. ಮಾವ

# ಓದುಗರ ಚೆನ್ನುಡಿ ...

ಎಂದಿನಂತೆ ಏಪ್ರಿಲ್ ಚಿಲುಮೆಯೂ ಸೊಗಸಾಗಿ ಹೊಮ್ಮಿ ಬಂದಿದೆ.

ಸಂಪಾದಕೀಯ ಬಲು ಅರ್ಥಪೂರ್ಣ ಹಾಗು ಅಳವಡಿಸಿಕೊಳ್ಳಲೇ ಬೇಕಾದ ಸತ್ಯ..

ನಾಗಶೈಲ ಕುಮಾರ್, ಸಿಡ್ನಿ

ಹೊರನಾಡ ಚಿಲುಮೆ ಏಪ್ರಿಲ್ ಸಂಚಿಕೆಯ ಎಲ್ಲ ಬರಹಗಾರರಿಗೂ ಅಭಿನಂದನೆಗಳು.

ಪ್ರಾರಂಭದಿಂದ ಅಂತ್ಯದವರೆಗೂ ಬರಹಗಳು ಅತ್ಯುತ್ತಮವಾಗಿದ್ದುವು, ಓದಿ ಸಂತೋಷ ಆಯ್ತು

ಹವಾಮಾನ ಬದಲಾವಣೆಗೂ, ಮಾನವೀಯ ಬದುಕಿನಲ್ಲಾಗುವ ಬದಲಾವಣೆಗಳಿಗೂ ಹೋಲಿಸಿ ಬರೆದಿರುವ ಬದರಿಯವರ ಸಂಪಾದಕೀಯ, ಶ್ರೀಮತಿ ಸೀತಾ ರವರ ಬಾಲ್ಯ/ಯುವಜೀವನದ ರಾಮನವಮಿ ಸಂಭ್ರಮದ ನೈಜ ಚಿತ್ರಣ, ಸ್ಮಿತರವರ ಮೊಬೈಲ್ ಪ್ರವರ, ರಾಮನಾಥ್ ರವರ ಹಾಸ್ಯ ಲೇಖನ, ಕವನಗಳು, ಪದ-ಪುಂಜ, ಮತ್ತಿತರ ಸ್ಥಳೀಯ ವರದಿಗಳು ಮನಸ್ಸಿಗೆ ಮುದ ತಂದಿತು. ಧನ್ಯವಾದಗಳು.

ರೇಖಾ ಶಶಿಕಾಂತ್ , ಸಿಡ್ನಿ

**Abhinandanegalu Horanada chilume tandakke**
**- Shrikant Ramadurg**

**Nice one**
**- Sunita Avadhani**

**Super like!**
**- Anu Shivaram**

**It's really great**
**- Mahendra Ballegowda**

**Best of luck to all**
**- Mysore Anand**

**Elladaru iru enthadaru iru endhendigu kannada nagiru:-:-D**
**- Radhakrishna Karanth**

**ಜಾಣ ಕರ್ನಾಟಕ – ಉತ್ತರ**

೧. ಮಂಗಳೂರು ಸಮಾಚಾರ, ಡಾ.ಹರ್ಮನ್ ಮೋಗ್ಲಿಂಗ್ (ಮೂಲತಃ ಜರ್ಮನ್ನರು), ೧ನೇ ಜುಲೈ ೧೮೪೩.

೨. ಇಂದಿರಾಬಾಯಿ ( ಅಥವಾ 'ಸದ್ಧರ್ಮ ವಿಜಯ'), ಗುಲ್ವಾಡಿ ವೆಂಕಟರಾಯರು, ೧೮೯೯

## ಪದ-ಪುಂಜ (ಶಾನೆ ತಲೆ ಕೆಡಿಸ್ಕೊಬೇಡಿ)

ಕೆಳಕಂಡ ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

೧.ಚಕ್ರವರ್ತಿಯೋ, ಕೈ ಕಡಗದಂತ ಜನಪ್ರಿಯ ಸಿಹಿ ತಿನಿಸೋ?

೨.ಬರೀ ಹೀಗೆ ಮಾಡಿ ಹಾಗೆ ಮಾಡಿ ಎಂದು ಹೇಳುವುದಷ್ಟೇ ಆದರೂ, ಚಿತ್ರದ ಗೆಲುವಿಗೆ ಇವನೇ ಮುಖ್ಯ ಕಾರಣ.

೩ ಹಣೆಯ ಮೇಲೆ ಬಂದು ಕುಳಿತು ತೂಗಾಡುವುದೇನು?

೪ ಧರ್ಮರಾಯನಿಗೆ ಪ್ರಶ್ನೆಗಳನ್ನು ಕೇಳಿದವ.

೫. ಬಳ್ಳಿಯಂತೆ ಹೆಸರೇನೋ ಇಟ್ಟುಕೊಂಡಳು ಹುಡುಗಿ, ಆದರೆ ಗಿಡ್ಡವಾಗಿಯೇ ಉಳಿದಳು.

೬. ಅಡಿಕೆಗೆ ಹತ್ತಿರವೇ, ಮೊದಲಿನಿಂದಲೂ ನಡೆದುಕೊಂಡ ಪದ್ಧತಿ.

ಉತ್ತರ: ಬಡವರಿಗೆಟುಕದ ಕಡಲೇಕಾಯಿಯ ಊರಿನಲ್ಲಿ ಒಳಹೊಕ್ಕು ನೋಡುವಂತಹದೇನು?

ನಿಮ್ಮ ಉತ್ತರ ಈಮೈಲ್ ಮಾಡಿ, (horanadachilume@gmail.com)

**ಮೇ 25 ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.**

## ಏಪ್ರಿಲ್ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಸರಿಯಾಗಿ ಉತ್ತರಿಸಿದವರು

- **ಸುಮ ಅಶೋಕ್, ಸಿಡ್ನಿ**
- **ರಾಘವೇಂದ್ರ ಮೂರ್ತಿ, ಬೆಂಗಳೂರು**
- **ಬಿ.ಆರ್. ವತ್ಸಲಾ ದ್ವಾರಕನಾಥ್, ಕೆ.ಜಿ.ಎಫ್**
- **ಹರಿಣಿ ರಾವ್, ನವದೆಹಲಿ**

ಏಪ್ರಿಲ್ ತಿಂಗಳ ಪದಪುಂಜದ ಉತ್ತರ

೧. ನಿಮ್ಮ ಮನವ ತಣಿಸಲೆಂದೇನೂ ಬಂದಿಲ್ಲ ಈ ರಾಸಾಯನಿಕ ಧಾತು.

| | | |
|---|---|---|
| ರಂ | ಜ | ಕ |

೨. ಬೆಡಗಿನೊಡನೆಯೇ ಬಂತು, ವಯ್ಯಾರದ ಮತ್ತೊಂದು ಈ ಗುಣ.

| | | |
|---|---|---|
| ಬಿ | ನ್ನಾ | ಣ |

೩. ದೇವರಿಗೆ ಪ್ರಭಾವಳಿಯಂತೆ, ನಮ್ಮ ನಾಡಿಗೆ ಅಲಂಕಾರ ಕಡಲ ತೀರದ ಈ ಸುಂದರ ಪ್ರದೇಶ.

| | | | |
|---|---|---|---|
| ಕ | ರಾ | ವ | ಳಿ |

೪. ಕಾಯೊಳಗೆ ಟುಕುಟುಕು ಅಲ್ಲಾಡುವುದೇನು?

| | | |
|---|---|---|
| ಗಿ | ಟು | ಕು |

೫. ಕಿರಿಯದಾದರೂ ಪಿಳ್ಳಾರಿ ಗಣಪನಿಗೆ ಬೇಕಾಗುವ ಈ ಹುಲ್ಲಿನ ಹಿರಿಮೆ ದೊಡ್ಡದೆ.

| | | |
|---|---|---|
| ಗ | ರಿ | ಕೆ |

ಉತ್ತರ: ಶ್ವೇತವರ್ಣದ ಬೆಟ್ಟವನ್ನೇರಿದರೇನು, ಕಾವೇರಿ ದ್ವೀಪವಾಸಿಯ ಬಣ್ಣ ಕಪ್ಪೇನೆ.

| | | | | | |
|---|---|---|---|---|---|
| ಬಿ | ಳಿ | ಗಿ | ರಿ | ರಂ | ಗ |

## ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

### ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮ ಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು … ▪



ಚುಕ್ಕಿಗಳು 17:9– ರಚನೆ: ಲಾವಣ್ಯ, ಸಿಡ್ನಿ

NRI SEVA
Educational, Legal, financial, Health,
Reality management services
Liaison work, Tours & Travels
visit www.nriseva.in or contact
Singapore – Harish +6598691760
Canada – SowmyaKeshava – 00968-99226928
Australia – Nagendra A- 0061401193852
Contact Mr. Nagendra EMAIL
0401193852


ಲೇಖಕರು:
ನಾಗಶೈಲ ಕುಮಾರ್

## ಭುವನೇಶ್ವರಿಯ ಅಳಲು

"ಎಲ್ಲಿ ಹೋದರು ನನ್ನೊಡಲ ಕಲಿಗಳು. ಕರುನಾಡ ಶೂರರ ಇಡೀ ವಂಶವಂಶಗಳೇ ನಾಶವಾಗಿ ಹೋದವೇನು. ಗಂಗ,ಕದಂಬ, ಚಾಳುಕ್ಯ, ರಾಷ್ಟ್ರಕೂಟ,ಹೊಯ್ಸಳ ವಂಶಗಳು ನೂರಾರು ವರ್ಷಗಳ ಕಾಲ ಹೋರಾಡಿ, ಕಟ್ಟಿ ಬೆಳೆಸಿದ ಈ ನನ್ನ ನಾಡು ಇಂದು ಕೇಳುವವರಿಲ್ಲದಂತಾಗುತ್ತಿದೆಯಲ್ಲಾ.

ನನ್ನ ಮಕ್ಕಳು, ಬರಿದೆ ಕಲ್ಲು ಮಣ್ಣಿನಿಂದ ಕೂಡಿದ ರಾಜ್ಯ ಮಾತ್ರವಲ್ಲ, ನನಗಾಗಿಯೇ ಒಂದು ಬಾಷೆಯನ್ನು ಬೆಳೆಸಿದರು, ಕಲೆಯನ್ನು ಅರಳಿಸಿದರು, ಸಾಹಿತ್ಯವನ್ನು ರಚಿಸಿದರು, ನನ್ನದೇ ಆದ ಶ್ರೀಮಂತ ಸಂಸ್ಕೃತಿಯನ್ನೇ ಬೆಳೆಸಿದರು.

ಕರ್ನಾಟವೆಂದರೆ ಕೇವಲ ಭರತ ಖಂಡವಷ್ಟೇ ಅಲ್ಲ ಅದರ ಸೀಮೆಯಾಚೆಗೂ ಜನತೆ ಬೆರಗಾಗುವಂತಹ ಸಾಮ್ರಾಜ್ಯ ಕಟ್ಟಿದರು.

ಇದೀಗ ನನ್ನ ರಾಜ್ಯ ಸಂಪತ್ತಿಗೆ ದೃಷ್ಟಿ ತಾಕಿತೇನು? ಎಂತಹ ಕೇಡುಗಾಲ ಬಂದೊದಗಿದೆ ನನಗೆ.

ಎಲ್ಲಿಂದ ಬರುತ್ತಿರುವರೋ ಈ ಪರಕೀಯ ಜನಗಳು. ಬೇರಾವುದೋ ಧರ್ಮವಂತೆ, ನಾವು ಕಂಡು ಕೇಳರಿಯದ ಸಂಸ್ಕೃತಿಯಂತೆ. ಬರಲಿ, ಪ್ರವಾಸಕ್ಕಾಗಿ ಬರಲಿ, ಜ್ಞಾನಾರ್ಜನೆಗಾಗಿ ಬರಲಿ, ವ್ಯಾಪಾರಕ್ಕಾಗಿ ಬರಲಿ ನಾವೇನೂ ತಡೆಯಲಾರೆವು.

ಆದರೆ ಸೈನ್ಯ ಸಮೇತ ಬಂದು ಯುದ್ಧ ಹೂಡುವುದೆಂದರೇನು. ನಾವು ಅವರ ಅಡಿಯಾಳುಗಳಾಗಬೇಕಂತೆ, ಮತಾಂತರ ಹೊಂದಬೇಕಂತೆ, ಅವರಿಗೇ ಕಪ್ಪ ಕಾಣಿಕೆಯೊಪ್ಪಿಸಬೇಕಂತೆ. ಅಷ್ಟೇ ಅಲ್ಲ ಈ ಮಣ್ಣಿನ ಮಕ್ಕಳು ಬೆವರುಹರಿಸಿ ನಿರ್ಮಿಸಿರುವ ಭವ್ಯವಾದ ಕೋಟೆ ಕೊತ್ತಲಗಳನ್ನು, ಗುಡಿಗೋಪುರಗಳನ್ನು, ಜ್ಞಾನಮಂದಿರಗಳನ್ನು, ಅಷ್ಟೇ ಏಕೆ ಊರೂರುಗಳನ್ನೇ ವಿಕಟಾಟ್ಟಹಾಸ ಬೀರುತ್ತಾ ನಾಶಗೈಯ್ಯುತ್ತಾ ಮುನ್ನುಗ್ಗುತ್ತಿರುವ ಅವರನ್ನು ಎದುರಿಸಬಲ್ಲವರು ಯಾರೂ ಇಲ್ಲವಾಗಿ ಹೋದರೇ?

ಮಯೂರ, ಪುಲಿಕೇಶಿ, ಕೃಷ್ಣ, ನೃಪತುಂಗ, ತೈಲಪ, ಬಿಟ್ಟಿದೇವ, ಬಲ್ಲಾಳರಂತಹ ಶೂರಪುತ್ರರನ್ನು ಹೆತ್ತ ನನ್ನೀ ಒಡಲು ಮತ್ತೊಮ್ಮೆ ಅಂತಹ ಮಕ್ಕಳನ್ನು ಹೆರಲಾರದಂತೆ ಬರಡಾಗಿ ಹೋಯಿತೇನು?

ಪಶುಪತಿನಾಥ, ಹೊಯ್ಸಳೇಶ್ವರ, ಕೀರ್ತಿನಾರಾಯಣ, ವಿಜಯನಾರಾಯಣ ಎಂದೆಲ್ಲಾ ಭವ್ಯ ಮಂದಿರಗಳನ್ನು ಕಟ್ಟಿಸಿಕೊಂಡ ದೇವಾನುದೇವತೆಗಳು ಕೂಡ ನನ್ನಂತೆ ಬರಿಯ ಕಲ್ಲಾಗಿ ಕುಳಿತರಲ್ಲಾ.

ಹೌದು ನನಗಾಗಿ ಮಂದಿರ ಕಟ್ಟಿದರು, ಭುವನೇಶ್ವರಿ ಎಂದು ಪೂಜಿಸಿದರು, ನಾಡದೇವಿ ಎಂದು ಪಟ್ಟಕಟ್ಟಿದರು. ಆದರೆ ಇವರಿಗಾಗಿ ನಾನೇನು ಮಾಡುತ್ತಿರುವೆ. ನಾನೂ ಅಸಹಾಯಕಳಾಗಿ, ಅನಾಥಳಾಗಿ ಹೋಗುತ್ತಿರುವೆನೆಲ್ಲಾ....."

---

## ಹಿಂದೂ ಸಾಮ್ರಾಜ್ಯದ ಹೊಂಬೆಳಕು

" ಸೋದರರೆ ನಿಮ್ಮ ಶೌರ್ಯ, ಪರಾಕ್ರಮ, ಸ್ವಾಭಿಮಾನಗಳನ್ನು ಒರೆಗೆ ಹಚ್ಚುವ ಕಾಲ ಬಂದಿದೆ. ನಿಮ್ಮ ಧೈರ್ಯ, ಯುಕ್ತಿ, ಸಂಘಟನಾ ಶಕ್ತಿ, ರಾಜಕೀಯ ರೀತಿ ನೀತಿಗಳ ಪರೀಕ್ಷೆ ನಡೆಯಬೇಕಾಗಿದೆ. ನಮ್ಮ ನಾಡು, ನುಡಿ, ಜನತೆ, ಸಂಸ್ಕೃತಿಗಳ ಮೇಲೆ ನಡೆಯುತ್ತಿರುವ ಅನಾಚಾರ ಅತ್ಯಾಚಾರಗಳಿಗೆ ಅಂತ್ಯ ಹಾಡಬೇಕಾಗಿದೆ. ಹರಿದು ಚೂರಾಗಿ ಹಂಚಿಹೋಗಿರುವ ನಮ್ಮ ನಾಡನ್ನು ಒಗ್ಗೂಡಿಸಬೇಕಾಗಿದೆ. ಒಳಜಗಳ, ಪಿತೂರಿ, ದುರಾಸೆಗಳಿಂದ ಪರಕೀಯರ ಎಂಜಲು ತಿನ್ನುತ್ತಾ ಅವರ ಅಡಿಯಾಳಾಗಿರುವ ತುಂಡು ಸಂಸ್ಥಾನಗಳ ಪುಂಡ ನಾಯಕರುಗಳ ಹುಟ್ಟಡಗಿಸಬೇಕಾಗಿದೆ. ತನ್ನ ನಾಡಿನಾಲ್ಲೇ ನೆಲೆಯನ್ನು ಕಳೆದುಕೊಂಡು, ಅಸಹಾಯಕಳು ಅನಾಥಳಂತಾಗಿರುವ ತಾಯಿ ಭುವನೇಶ್ವರಿಗೆ ಮತ್ತೆ ವೈಭವದ ಮುಕುಟ ತೊಡಿಸಿ ಮೆರವಣಿಗೆ ನಡೆಸಬೇಕಾಗಿದೆ". ಹಿರಿಯ ಯತಿಗಳು ತಮ್ಮ ಮುಂದಿದ್ದ ಯುವಕರನ್ನುದ್ದೇಶಿಸಿ ಹೇಳುತ್ತಾ ಅವರ ಮುಖದಲ್ಲಿ ಉಕ್ಕುತ್ತಿದ್ದ ರೋಷಾವೇಷವನ್ನು ಗಮನಿಸಿದರು.

ಆ ನವ ಯುವಕರ ಮೊಗದಲ್ಲಿ ತೇಜಸ್ಸು, ಕಣ್ಣುಗಳಲ್ಲಿ ಭವಿಷ್ಯದ ಭವ್ಯ ಕನಸ್ಸು ತುಂಬಿತ್ತು. ಮಾತುಗಳಲ್ಲಿ, ಛಲ ಸ್ವಾಭಿಮಾನದ ಮೊನಚು, ನಡೆನುಡಿಯಲ್ಲಿ ಅರಿವು, ಸಂದರ್ಭೋಚಿತ ವಿನಯ ವಿಧೇಯತೆಗಳ ಸೆಲೆಯಿತ್ತು.

"ನಮ್ಮ ಭುವನೇಶ್ವರಿ ಮಾತೆ ಅಸಹಾಯಕಳು. ಅನಾಥಳು ಆಗುವುದೆ? ನಮ್ಮ ಉಸಿರಿರುವವರೆವಿಗೂ ಹಾಗಾಗಲು ಬಿಡಲಾರೆವು. ನಮ್ಮ ತೋಳ್ಬಲ, ಜನಬಲಗಳಿಗೆ, ನಿಮ್ಮ ತಪೋಬಲ, ಮಾರ್ಗದರ್ಶನ ಸೇರಿ, ಮತ್ತೆ ನಮ್ಮ ಹಿಂದೂ ಧರ್ಮದ ಪುನರುತ್ಥಾನವಾಗುವುದು ಖಂಡಿತ. ನಮ್ಮ ನಾಡನ್ನು ದುರಾಕ್ರಮಿಸಿ, ಜನಸಾಮಾನ್ಯರಲ್ಲಿ ಭೀತಿ ಮೂಡಿಸಿ, ನಮ್ಮ ಉಳಿವಿಗೇ ಮಾರಕವಾವಾಗಿರುವ ಧೂರ್ತ ದೆಹಲಿ, ವಿಜಯಪುರ, ಮುಂತಾದೆಡೆಗಳ ಸುಲ್ತಾನರ ದಬ್ಬಾಳಿಕೆಗೆ ಕಡಿವಾಣ ಹಾಕವುದೇ ನಮ್ಮ ಧ್ಯೇಯ. ಇದಕ್ಕಾಗಿ ನಮ್ಮ ತನುಮನಧನಗಳನ್ನು ಮುಡಿಪಾಗಿಡುವೆವು. ನಿಮ್ಮ ಸಂಕಲ್ಪ, ಆಶೀರ್ವಾದಗಳು ಇಂದು ನಮಗೆ ಅವಶ್ಯವಾಗಿದೆ. ಮನಸಾರೆ ಆಶೀರ್ವದಿಸಿ ನಮ್ಮನ್ನು ಹರಸಬೇಕು" ಎನ್ನುತ್ತಾ ಇನ್ನೂ ತಾರುಣ್ಯದ ಹೊಸ್ತಿಲಲ್ಲಿದ್ದ ಯುವಸಹೋದರರಿಬ್ಬರು ಯತಿಗಳ ಚರಣಗಳಿಗೆರಗಿದರು.

ಮುಂದಿನ ಪುಟ ನೋಡಿ ...

ಮಾತಂಗ ಪರ್ವತದಲ್ಲಿ ನೆಲೆಯಾಗಿದ್ದ ಯತಿ ಶ್ರೀಮಾಧವ ವಿದ್ಯಾರಣ್ಯರು ನವತರುಣರಾದ ಬುಕ್ಕರಾಯ ಹಾಗು ಹರಿಹರರಾಯ ಸಹೋದರರೊಡನೆ ಸಮಾಲೋಚನೆಯಲ್ಲಿ ತೊಡಗಿದ್ದರು. ಜ್ಞಾನಸಂಪತ್ತಿನಲ್ಲಿ ಸಂಪದ್ಭರಿತ ಅರಣ್ಯದಂತಿದ್ದ ವಿದ್ಯಾರಣರು ಶೃಂಗೇರಿ ಜಗದ್ಗುರುಗಳ ಹಿರಿಯ ಸೋದರರು. ಭಾರತಾದ್ಯಂತ ಸಂಚರಿಸಿ ಹಿಂದೂ ಧರ್ಮಕ್ಕೊದಗಿದ್ದ ಹೀನಾಯ ಸ್ಥಿತಿಯಿಂದ ಅತೀವವಾಗಿ ನೊಂದಿದ್ದರು. ಮುಸ್ಲಿಮ್ ಆಡಳಿತಗಾರರ ದಬ್ಬಾಳಿಕೆಯಿಂದ ರೋಸಿ ಹೋಗಿದ್ದರಲ್ಲದೆ, ತಮ್ಮ ಅವನತಿಗೆ ತಾವೇ ಕಾರಣರಾಗುತ್ತಿರುವ ಸಣ್ಣ ಪುಟ್ಟ ಪ್ರಾಂತ್ಯಗಳ ರಾಜರುಗಳ ಒಳಸಂಚುಗಳು, ಮತ್ತು ಒಗ್ಗಟ್ಟಿಲ್ಲದೆ ತಮ್ಮವರ ಬೆನ್ನಿಗೇ ಚೂರಿ ಹಾಕುವ ಹೀನ ತಂತ್ರಗಳ ಕಂಡು ಕುದಿಯುತ್ತಿದ್ದರು. ಇಂತಹ ಸಮಯದಲ್ಲಿ ಸುಲ್ತಾನರುಗಳನ್ನು ಎದುರಿಸಬಲ್ಲ, ಸ್ಥಳೀಯ ರಾಜರುಗಳನ್ನು ಸಂಘಟಿಸಿ ಹೋರಾಡಬಲ್ಲ, ಶಕ್ತಿ ಯುಕ್ತಿಗಳು ಮೇಳೈಸಿರುವ ಉತ್ಸಾಹೀ ರಾಜರು ಯಾರಾದರೂ ಇರುವರೇನೋ ಎಂದು ಅರಸುತ್ತಿದ್ದರು.

ಇಂತಹ ಸಮಯದಲ್ಲೇ ಅರಸುತ್ತಿದ್ದ ಬಳ್ಳಿ ತಾನಾಗೆ ಕಾಲಿಗೆ ತೊಡರಿದಂತೆ ಅವರ ಬಳಿಗೆ ಬಂದವರು ಸಂಗಮ ಸಹೋದರರೆನಿಸಿ ಖ್ಯಾತರಾಗಿದ್ದ, ಹರಿಹರ ಮತ್ತು ಬುಕ್ಕರಾಯ, ಹಕ್ಕ ಬುಕ್ಕರೆಂದೇ ಹೆಸರಾಗಿದ್ದ ಸಂಗಮ ಸೋದರರ ಧ್ಯೇಯವೂ, ಯತಿ ವಿದ್ಯಾರಣ್ಯರ ಧ್ಯೇಯವೂ ಒಂದೇ, ದಕ್ಷಿಣ ಭಾರತದಲ್ಲಿ ಪ್ರಬಲವಾದ ಹಿಂದೂ ಸಾಮ್ರಾಜ್ಯವೊಂದನ್ನು ಸ್ಥಾಪಿಸಬೇಕೆಂಬುದು.

ಇವರ ಆಶಯಗಳಿಗೆ ಇಂಬುಗೊಡುವಂತೆ ಹೊಯ್ಸಳ ಚಕ್ರವರ್ತಿ ಮೂರನೆಯ ವೀರಬಲ್ಲಾಳನ, ಸಂಪೂರ್ಣ ಕೃಪಾಕಟಾಕ್ಷ ಇವರಿಗೆ ದೊರೆಯಿತು.

*********

ಹೊಯ್ಸಳ ದೊರೆ ಮೂರನೆಯ ವೀರಬಲ್ಲಾಳ ದಕ್ಷಿಣ ಭಾರತದಲ್ಲಿ ಏಕಾಂಗಿಯಾಗಿ, ದೆಹಲಿಯ ಸುಲ್ತಾನರ ವಿರುದ್ಧ ತಿರುಗಿ ನಿಂತಿದ್ದ.

ಅಷ್ಟೇ ಅಲ್ಲದೆ, ಕುಶಲತೆಯಿಂದ ಸದ್ದಿಲ್ಲದಂತೆ ಸಣ್ಣಪುಟ್ಟ ಹಿಂದೂ ರಾಜರನ್ನೆಲ್ಲಾ ಭೇಟಿ ಮಾಡುತ್ತಾ, ಒಂದು ಮಹಾಸೈನ್ಯವನ್ನು ಕಟ್ಟಿ ತಮ್ಮ ನಾಡು, ಸಂಸ್ಕೃತಿ, ಧರ್ಮಗಳನ್ನು ಕಾಪಾಡಲು, ಸಿದ್ಧತೆ ನಡೆಸಿದ್ದ. ಇಂತಹ ಸಮಯದಲ್ಲಿ ಆವನಿಗೆ ಬೆನ್ನೆಲುಬಾಗಿ ಬೆಂಬಲ ನೀಡಿದವರು, ತುಂಗಭದ್ರಾ ನದಿ ತೀರದಲ್ಲಿ ಹಂಪೆ ಮತ್ತು ಸುತ್ತಮುತ್ತಲಿನ ಪ್ರದೇಶಗಳನ್ನಾಳುತ್ತಿದ್ದ ಸಂಗಮ ಮತ್ತು ಅವನ ಮಕ್ಕಳು. ವೀರಬಲ್ಲಾಳನ ವಿಶ್ವಾಸಗಳಿಸಿದ ಸಂಗಮನ ಹಿರಿಯ ಪುತ್ರ ಹರಿಹರರಾಯನನ್ನು ಹೊಯ್ಸಳ ಸಾಮ್ರಾಜ್ಯದ ಉತ್ತರ ಭಾಗಕ್ಕೆ ಮಹಾಮಂಡಳೇಶ್ವರನನ್ನಾಗಿ ನೇಮಿಸಿದ್ದ.

ದಕ್ಷಿಣದ ಮಧುರೆಯಲ್ಲಿ ಸುಲ್ತಾನನ ಅಧಿಕಾರಿಗಳ ಉಪಟಳ ಅಧಿಕವಾಗಿ,ಅವರನ್ನು ಹದ್ದುಬಸ್ತಿನಲ್ಲಿಡಲು ವೀರಬಲ್ಲಾಳ ಹೋರಾಡುತ್ತಿದ್ದರೆ, ಉತ್ತರದ ತುಂಗಭದ್ರಾ ಸುತ್ತಲಿನ ಪ್ರದೇಶ ಮತ್ತು ಆಂಧ್ರ ದೇಶಗಳ ಭಾಗಗಳನ್ನು ಸುಲ್ತಾನನ ಕಪಿಮುಷ್ಟಿಯಿಂದ ಬಿಡಿಸಿ ತಮ್ಮ ಆಡಳಿತದಡಿಯಲ್ಲಿ ತರುವಲ್ಲಿ ಸಹೋದರರು ಯಶಸ್ವಿಯಾದರು. ಹಿಂದೂಗಳೆಂದರೆ ಒಗ್ಗಟ್ಟಿಲ್ಲದವರು, ಕುತಂತ್ರ, ಪಿತೂರಿಗಳಿಂದ ಅವರನ್ನು ಒಡೆದು ಆಳಬಹುದೆಂದು ನಂಬಿದ್ದ ಸುಲ್ತಾನನ ಅಧಿಕಾರಿಗಳು, ಹಕ್ಕ ಮತ್ತು ಬುಕ್ಕರ ಸಂಘಟಿತ ಆಕ್ರಮಣದಿಂದ ಕಂಗಾಲಾಗಿ, ತಾವು ಆಕ್ರಮಿಸಿಕೊಂಡಿದ್ದ ಪ್ರಾಂತ್ಯಗಳಿಂದ ಪಲಾಯನ ಮಾಡಿದರು.

೧೩೩೬ ರಲ್ಲಿ ವಿಜಯನಗರ ಸಾಮ್ರಾಜ್ಯದ ಉದಯವಾಯಿತು. ಹರಿಹರರಾಯ ಅದರ ರಾಜನಾಗಿ ಅಭಿಷಕ್ತನಾದರೆ ಬುಕ್ಕರಾಯ ಯುವರಾಜನಾದ. ತುಂಗಭದ್ರಾ ನದಿಯ ದಕ್ಷಿಣದಲ್ಲಿ ಹೊಸದಾಗಿ ನಿರ್ಮಿತವಾದ ರಾಜಧಾನಿ ವಿಜಯನಗರದ ಹೆಸರಿನಲ್ಲಿಯೇ ಸಾಮ್ರಾಜ್ಯವೂ ಬೆಳೆಯಿತು. ವೀರವಿರೂಪಾಕ್ಷ ವಿಜಯನಗರದ ಆರಾಧ್ಯ ದೈವವಾದ. ಪೂರ್ವ ಪಶ್ಚಿಮ ಕರಾವಳಿಗಳ ನಡುವಿನ ಬಹುವಿಶಾಲ ಪ್ರದೇಶವನ್ನು ಗೆದ್ದು ಸಾಮ್ರಾಜ್ಯ ವಿಸ್ತರಿಸಿದ ಹರಿಹರರಾಯ 'ಪೂರ್ವಪಶ್ಚಿಮ ಸಮುದ್ರಾಧೀಶ್ವರ' ಎಂಬ ಬಿರುದು ಧರಿಸಿದ.

ವಿಶಾಲವಾದ ಸಾಮ್ರಾಜ್ಯವನ್ನು ಮಂಡಲಗಳನ್ನಾಗಿ ವಿಭಜಿಸಿ, ವಿಭಾಗಾಧಿಕಾರಿಗಳನ್ನು ನೇಮಿಸಿದ ಹರಿಹರನಿಗೆ, ಬುಕ್ಕರಾಯನದು ಮಾತ್ರವಲ್ಲದೆ ಉಳಿದ ಸಹೋದರರಾದ ಕಂಪಣ, ಮಾರಪ್ಪ, ಮುದ್ದಪ್ಪರ ಬೆಂಬಲವೂ ದೊರೆತು, ಗಂಭೀರವಾಗಿ ಸಾಮ್ರಾಜ್ಯ ವಿಸ್ತರಣೆಗೆ ಗಮನ ನೀಡಲು ಸಾಧ್ಯವಾಯಿತು. ಹೊಯ್ಸಳ ಸಾಮ್ರಾಜ್ಯದ ಉತ್ತರಭಾಗದಲ್ಲಿ ಸಂಗಮ ಸಹೋದರರು ವಿಜಯದ ಮೇಲೆ ವಿಜಯ ಸಾಧಿಸುತ್ತಾ ನಡೆದಿರಲು, ದಕ್ಷಿಣದ ಮಧುರೆಯಲ್ಲಿ ವೃದ್ಧ ವೀರಬಲ್ಲಾಳನು, ಯಾರ ಬೆಂಬಲವೂ  ಇಲ್ಲದೆ ಸುಲ್ತಾನನ ಅಧಿಕಾರಿಗಳೊಡನೆ ಹೋರಾಡುತ್ತಾ, ಅವರ ಮೋಸಕ್ಕೆ ಬಲಿಯಾಗಿ ಮರಣವನ್ನಪ್ಪಿದನು. ಬಲ್ಲಾಳರಾಯನ ಮಗ ವೀರವಿರೂಪಾಕ್ಷನು ಸಾಮರ್ಥ್ಯ ರಾಜನಾಗದೆ ಹೊಯ್ಸಳ ಸಾಮ್ರಾಜ್ಯದ ಅಂತ್ಯವಾಗಿ, ಅದರ ಪ್ರದೇಶಗಳು ವಿಜಯನಗರದಲ್ಲಿ ಸೇರಿಕೊಂಡವು.

ಶೃಂಗೇರಿ ಜಗದ್ಗುರು ಪೀಠವು ಹಕ್ಕಬುಕ್ಕರಿಗೆ ವಿಶೇಷವಾದ ಸ್ಫೂರ್ತಿಯನ್ನೀಡುವ ಕೇಂದ್ರವಾಗಿ, ಅಲ್ಲಿಗೆ ಯಥೇಚ್ಚ ದತ್ತಿದಾನಗಳನ್ನು ನೀಡಿ ಅದನ್ನೊಂದು ಪ್ರಮುಖ ಹಿಂದೂ ಧಾರ್ಮಿಕ ಹಾಗೂ ಅಧ್ಯಯನ ಕೇಂದ್ರವಾಗಿಸಿದರು.

೧೩೫೬ ರಲ್ಲಿ ಹರಿಹರರಾಯನ ಅಂತ್ಯವಾಯಿತು.

***********

ಮುಂದಿನ ಪುಟ ನೋಡಿ ...

ಬುಕ್ಕರಾಯನು ಅಣ್ಣನ ಸ್ಥಾನದಲ್ಲಿ ರಾಜ್ಯಭಾರ ವಹಿಸಿಕೊಂಡ. ಅಣ್ಣನೊಡನೆ ಬಲಭುಜವಾಗಿ ಹೋರಾಡುತ್ತಿದ್ದ ಬುಕ್ಕರಾಯ ಈಗ ಸಂಪೂರ್ಣ ಜವಾಬ್ದಾರಿಯನ್ನು ತಾನೇ ಹೊತ್ತ. ಇನ್ನೂ ಹೆಚ್ಚಿನ ಶಕ್ತಿ, ಯುಕ್ತಿಗಳಿಂದ ಸಾಮ್ರಾಜ್ಯದ ವಿಸ್ತರಣೆ ನಡೆಯಿತು.

ಬಹಮನಿ ಸಾಮ್ರಾಜ್ಯವು ಒಂದು ಪ್ರಬಲವಾದ ಶತ್ರುವಾಗಿ ಬೆಳೆಯುತ್ತಿತ್ತು. ಸತತವಾಗಿ ವಿಜಯನಗರದ ಮೇಲೆ ಧಾಳಿ ನಡೆಸಿದರೂ ಜಯಕಾಣದೆ, ಕತ್ತಿ ಮಸೆಯುತ್ತಿದ್ದ ಸುಲ್ತಾನ ಮಹಮದ್ ಷಾ. ಈ ಧಾಳಿಗಳಿಂದ ಜಾಗರೂಕನಾದ ಬುಕ್ಕರಾಯ ತನ್ನ ಗಡಿಗಳನ್ನು ಭದ್ರಪಡಿಸಿ, ಅವಿಧೇಯರಾಗಿದ್ದ ಅಧೀನ ರಾಜರುಗಳನ್ನು ತನ್ನ ಹತೋಟಿಗೆ ತಂದ. ದಕ್ಷಿಣ ಭಾರತದಲ್ಲಿ ಹಿಂದೆಂದೂ ಕಾಣದಂತ ಪ್ರಮಾಣದಲ್ಲಿ ಬೃಹತ್ತಾದ ಸುಸಜ್ಜಿತ ಸೈನ್ಯವನ್ನು ಕಟ್ಟಿದ.

ಇಷ್ಟೆಲ್ಲ ಸಿದ್ಧತೆಗಳೊಡನೆ ಬುಕ್ಕರಾಯ ತನ್ನ ಪುತ್ರ ಕಂಪಣನಿಗೆ ಮಧುರೆಯ ಧಾಳಿಯ ಜವಾಬ್ದಾರಿ ವಹಿಸಿದ. ಕಂಪಣ ಇನ್ನೂ ಯುವಕನಾದರೂ ಧೀರ, ಯುಕ್ತಿಶಾಲಿ, ಮುನ್ನುಗ್ಗಿ ಕೆಲಸ ಸಾಧಿಸುವ ಛಲಗಾರ. ಪರಕೀಯರನ್ನು ಹೊಡೆದೋಡಿಸುವ ಕಾರ್ಯದಲ್ಲಿ ತಂದೆಯೊಡನೆ ಜೊತೆಯಾಗಿ ಹೋರಾಡಿಅದ ಅನುಭವವೂ ಸಾಕಷ್ಟಿತ್ತು.

ತನ್ನ ಮೊದಲ ದಿಗ್ವಿಜಯವನ್ನು ವಿಜಯನಗರದ ಪೂರ್ವಕ್ಕಿದ್ದ ತೊಂಡೈಮಂಡಲ ಮೇಲೆ ಸಾಧಿಸಿದ ಕಂಪಣ. ತೊಂಡೈಮಂಡಲ ರಾಜ ಚಂಪರಾಯ ವಿಜಯನಗರದ ಅರಸರೊಡನೆ ಕೈಜೋಡಿಸದೆ ತೊಂದರೆ ಕೊಡುತ್ತಿದ್ದ. ಇದರಿಂದ ಬಹಮನಿ ಸುಲ್ತಾನರು ತೊಂಡೈಮಂಡಲವನ್ನು ವಶಪಡಿಸಿಕೊಳ್ಳುವ ಸಾಧ್ಯತೆಗಳು ಹೆಚ್ಚಾಗಿದ್ದವು, ಇದು ವಿಜಯನಗರದ ಭದ್ರತೆಗೂ ಭಂಗ ತರುವಂತಹ ವಿಷಯ. ತೊಂಡೈ ಮಂಡಲದ ಮೇಲೆ ಯುದ್ಧಹೂಡಿ ಅದನ್ನು ಸೋಲಿಸಿದ ಕಂಪಣ, ಅಲ್ಲಿಂದ ತಪ್ಪಿಸಿಕೊಂಡು ಹೋದ ಚಂಪರಾಯನನ್ನು ಬೆನ್ನತ್ತಿ ಕೊಂದ.

ಮುಂದಿನ ಬಲು ಮುಖ್ಯ ಜವಬ್ದಾರಿಯಾದ ಮಧುರೆಯ ದಂಡಯಾತ್ರೆ,ಇದು ಕಂಪಣನ ಒಂದು ಮಹತ್ವದ ಸಾಧನೆ. ಮಧುರೆಯ ಜನತೆಯ ವೇದನೆ ಯಾವ ಸ್ಥಿತಿಗೆ ತಲುಪಿತ್ತೆಂದರೆ, ದೇವಾಲಯಗಳಲ್ಲಿ ಪೂಜೆಗಳು ನಿಂತು ಹಾಳು ಸುರಿಯುತ್ತಿದ್ದವು, ಸಾರ್ವಜನಿಕವಾಗಿ ವೇದಾಧ್ಯಯನ, ವೇದಪಾಠಗಳು, ಹೋಮಹವನಗಳು ಯಾವುದೂ ನಡೆಯುವಂತಿರಲಿಲ್ಲ. ಸ್ತ್ರೀಯರು ನಿರ್ಭಯವಾಗಿ ತಿರುಗಾಡಲೂ ಹೆದರುವಂತಾಗಿತ್ತು. ನಂದನವನದಂತಿದ್ದ, ಪಾಂಡ್ಯರ ಕಾಲದಲ್ಲಿ ದೇವಲೋಕಸದೃಶವಾಗಿದ್ದ ನಗರವು, ಅಲ್ಲಿನ ಜನತೆಯ ಪಾಲಿಗೆ ನರಕವಾಗಿತ್ತು. ಮಧುರೆ ಮಾತ್ರವಲ್ಲದೆ, ಚಿದಂಬರಮ್, ಶ್ರೀರಂಗಮ್ ಮುಂತಾದ ಪ್ರಮುಖ ಧಾರ್ಮಿಕ ಕ್ಷೇತ್ರಗಳಿಗೂ ಭಕ್ತಾದಿಗಳು ಬಾರದಂತಾಗಿತ್ತು. ದೇವರ ವಿಗ್ರಹಗಳು ಹಾಳಾಗುವುದನ್ನು ತಪ್ಪಿಸಲು ಮುಸ್ಲಿಮ್ ಸೈನಿಕರ ಕಣ್ಣಿಗೆ ಬೀಳದಂತೆ ಬಚ್ಚಿಡುತ್ತಿದ್ದರು.

ಅಂದಿನ ಪರಿಸ್ಥಿತಿ ಎಷ್ಟು ಶೋಚನೀಯವಾಗಿತ್ತೆಂದರೆ, ಒಂದೆಡೆ ಸ್ವತಃ ಮಧುರೆ ಮೀನಾಕ್ಷಿಯೇ ಕಂಪಣನ ಕನಸ್ಸಿನಲ್ಲಿ ಬಂದು ತನ್ನ ನೆಲೆಯನ್ನು, ಅದರ ಜನತೆಯನ್ನು ರಕ್ಷಿಸಲು ಕೇಳಿಕೊಂಡಳು ಎಂದು ಬರೆದಿದ್ದಾರೆ.

ಮಧುರೆಯಲ್ಲಿ ಸುಲ್ತಾನನ ಅಧಿಕಾರಿಗಳು ನಡೆಸುತ್ತಿದ್ದ ಕ್ರೂರ ಕೃತ್ಯಗಳ ಬಗ್ಗೆ ತಿಳಿದ ಕಂಪಣ ರೋಷ ತಳೆದ. ಅವರ ಹುಚ್ಚಾಟಗಳಿಗೆ ಕೊನೆಗಾಣಿಸಿ ಅವರನ್ನು ಬೇರು ಸಹಿತ ಕಿತ್ತೊಗೆಯಲು ನಿರ್ಧರಿಸಿ, ಮಧುರೆಗೆ ಮುತ್ತಿಗೆ ಹಾಕಿದ. ಯುದ್ಧದಲ್ಲಿ ಸುಲ್ತಾನನ ದಂಡನಾಯಕರುಗಳು ಹತರಾದರು. ಮಧುರೆ , ಜೊತೆಗೆ ಶ್ರೀರಂಗಂ ವಿಜಯನಗರದವರ ವಶವಾಯಿತು. ಜನಜೀವನ ಯಥಾಸ್ಥಿತಿಗೆ ಮರಳಿತು. ಪೂಜಾಕೈಂಕರ್ಯಗಳು, ಧರ್ಮಕಾರ್ಯಗಳ ಪುನರಾರಂಭವಾಯಿತು.

ಕಂಪಣನ ಸತಿ ಗಂಗಾದೇವಿ, ಈ ವಿಜಯವನ್ನು 'ಮಧುರಾವಿಜಯ' ಅಥವಾ 'ಕಂಪಣರಾಯ ಚರಿತಮ್' ಎಂಬ ಕೃತಿಯನ್ನು ರಚಿಸಿದಳು.

ಕಾವೇರಿ ನದಿ ತೀರದ ಮರಕತನಗರ ಎಂಬ ಪಟ್ಟಣವನ್ನು ರಾಜಧಾನಿಯನ್ನಾಗಿಸಿಕೊಂಡು ಕಂಪಣನು ವಿಜಯನಗರ ಸಾಮ್ರಾಜ್ಯದ ದಕ್ಷಿಣದ ಅಧಿಕಾರಿಯಾಗಿ ರಾಜ್ಯಭಾರ ನಡೆಸಿದ. ರಾಮೇಶ್ವರದಿಂದ ಕೋಲಾರ, ಬೆಂಗಳೂರು ಒಳಗೊಂಡಂತೆ ದಕ್ಷಿಣ ಭಾಗವೆಲ್ಲಾ ಅವನ ಆಡಳಿತದಡಿಯಲ್ಲಿತ್ತು.

ಒಬ್ಬ ಉತ್ತಮ ಆಡಳಿತಗಾರನಾಗಿ, ಸಮರ್ಥ ಜನಪ್ರಿಯ ರಾಜನಾಗಿ ರೂಪುಗೊಳ್ಳುತ್ತಿದ್ದ ಕಂಪಣ. ಆದರೆ ವಿಧಿಯ ಸಂಚೇ ಬೇರಿತ್ತು. ೧೩೭೪ ರಲ್ಲಿ ಕಂಪಣ ನಿಧನ ಹೊಂದಿದ. ಇದು ಬುಕ್ಕರಾಯನಿಗೆ ಮತ್ತು ಇಡೀ ವಿಜಯನಗರ ಸಾಮ್ರಾಜ್ಯಕ್ಕೇ ಬಿದ್ದ ದೊಡ್ಡ ಹೊಡೆತವಾಯಿತು.

ಬುಕ್ಕರಾಯ ಶತ್ರುಗಳ ನಿಗ್ರಹಿಸಿ, ಗಡಿಗಳ ಭದ್ರಗಳ ಪಡಿಸಿ, ಬಲಿಷ್ಠ ಸೇನೆಯನ್ನು ಕಟ್ಟಿ ವಿಜಯನಗರಸಾಮ್ರಾಜ್ಯಕ್ಕೆ ಭದ್ರ ತಳಹದಿ ಹಾಕಿದ. ಅಷ್ಟೇ ಅಲ್ಲದೆ ಪ್ರಜಾಹಿತವ ಕಾಯುವಲ್ಲೂ ಪ್ರಬುದ್ಧನೆನಿಸಿದ. ಅಲ್ಪ ಸಂಖ್ಯಾತರಾಗಿದ್ದ ಜೈನ ಹಾಗು ಅಂದಿನ ದಿನಗಳಲ್ಲಿ ಪ್ರಬಲರಾದ ವೈಷ್ಣವರ ನಡುವೆ ಮನಸ್ತಾಪಗಳು ಆಗಾಗ್ಗೆ ಭುಗಿಲೇಳುತ್ತಿದ್ದವು. ಆಯಾ ಮತಗಳ ಹಿರಿಯರ ಸಭೆ ಸೇರಿಸಿ ಅವರಿಗೆ ಬುದ್ಧಿಮಾತುಗಳನ್ನು ಹೇಳಿ,

"ಇಬ್ಬರ ನಡುವಿನ ಮನಸ್ತಾಪದಿಂದ ಯಾರಿಗೂ ಲಾಭವಿಲ್ಲ, ಜೈನಧರ್ಮವಾಗಲೀ, ವೈಷ್ಣವ ಧರ್ಮವಾಗಲೀ ದ್ವೇಷ, ಹಿಂಸೆಯನ್ನು ಭೋದಿಸುವ ಧರ್ಮಗಳಲ್ಲ, ಎರಡೂ ಶ್ರೇಷ್ಠ ಧರ್ಮಗಳೇ. ಹೆಚ್ಚು ಕಡಿಮೆ ತಾರತಮ್ಯ ಬೇಡ, ನಿಮ್ಮಲ್ಲಿ ಸಾಮರಸ್ಯವಿರಬೇಕು. ನಮ್ಮನಮ್ಮಲ್ಲೇ ಒಡಕುಂಟಾದರೆ ಅದರ ಫಲವನ್ನು ಅನುಭವಿಸುವುದು ದೆಹಲಿಯ ಸುಲ್ತಾನ. ನೀವು ಒಗ್ಗಟ್ಟು ತೋರಿಸಿ ನಮ್ಮಹಿಂದೂ ರಾಜ್ಯದ ಒಳಿತನ್ನು ಕಾಪಾಡಬೇಕು" ಎಂದು ತಿಳಿವಳಿಕೆ ಹೇಳಿದ.

ಮುಂದಿನ ಪುಟ ನೋಡಿ ...

ಹೀಗೆ ಶೈವ, ವೈಷ್ಣವ, ಜೈನ ಯಾವುದೇ ಪಂಥವಿರಲಿ, ಎಲ್ಲರಲ್ಲೂ ಸಹಮತವಿರುವಂತಹ ವಾತಾವರಣ ವಿಜಯನಗರ ಸಾಮ್ರಾಜ್ಯದಲ್ಲಿ ಮೂಡಿತ್ತು. ಶಾಂತಿ, ಶ್ರದ್ಧೆ, ಸಮಾಧಾನಗಳು ಜನರಲ್ಲಿ ನೆಲೆಸಿತ್ತು. ದಕ್ಷ ಅಧಿಕಾರಿಗಳ ನೇಮಕವಾಗಿ, ಪ್ರಜಾಹಿತವೇ ಅವರ ಆದ್ಯತೆಯಾಗಿ, ಆಡಳಿತ ನಡೆಸುವಂತೆ ವ್ಯವಸ್ಥೆ ಮಾಡಲಾಗಿತ್ತು. ಬುಕ್ಕರಾಯನು ೧೩೭೭ ರಲ್ಲಿ ೨೦ ವರ್ಷಗಳ ಯಶಸ್ವೀ ಆಡಳಿತದ ನಂತರ ನಿಧನಾದನು.

ಕರುನಾಡಿನ ಸುವರ್ಣಯುಗದ ಆರಂಭ ವಿಜಯನಗರದಲ್ಲಾಗಿತ್ತು.

ಭುವನೇಶ್ವರಿಯ ಒಡಲಲ್ಲಿ ಮತ್ತೆ ಸಂತೃಪ್ತಿ, ಸಮೃದ್ಧಿ, ತುಂಬಿ ನವಚೇತನ ಮೂಡಿತು. ▪

# ಕನ್ನಡದ ಒಂದು ಕಾಯಕಕ್ಕೆ ಕೈ ಜೋಡಿಸಿ

**ನೊಂದಾಯಿಸಲು ಮಿಂಚಂಚೆ ವಿಳಾಸ -sugamakannada@gmail.com**

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ವಚನ, ಕಗ್ಗ, ಗಮಕ, ಹರಿದಾಸ ಸಾಹಿತ್ಯಗಳು ಕೆಲವು ಪ್ರಮುಖ ಪ್ರಾಕಾರಗಳು. ಇವುಗಳಲ್ಲಿ ಭಗವಂತನ ನಾಮಸ್ಮರಣೆಯಷ್ಟೇ ಅಲ್ಲದೆ, ವಚನಗಳು ತಮ್ಮ ಸರಳ ನುಡಿಯಲ್ಲಿ ಅನುಭವದ ಅರಿವು ನೀಡುವಲ್ಲಿ ನೆರವಾದರೆ, ಹರಿದಾಸ ಸಾಹಿತ್ಯವು ಸಂಗೀತ ಮತ್ತು ಸೊಬಗಿನ ಸಾಹಿತ್ಯದ ಮಿಳನವಾಗಿದೆ. ಕಗ್ಗ, ತ್ರಿಪದಿ,ಷಟ್ಪದಿಗಳು ಅರ್ಥಪೂರ್ಣ ವಿಚಾರಗಳಿಂದ ಕೂಡಿ ಜೀವನದರ್ಶನ ಹಾಗೂ ವಿಚಾರಪೂರ್ಣ ವಿಷಯಗಳಾಗಿ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಜಗತ್ತಿನ ಎಂದಿಗೂ ಝುಗಝುಗಿಸುವ ಕೊಡುಗೆಗಳಾಗಿವೆ.

ಅಂತರ್ಜಾಲದ ಈ ಮಹಾ ಜಗತ್ತಿನಲ್ಲಿ ಈಗ ಸಾಕಷ್ಟು ಕನ್ನಡಿಗರು ಕರ್ನಾಟಕದಿಂದ ಹೊರಗಿರುವುದು ಎಲ್ಲರಿಗೂ ತಿಳಿದ ವಿಚಾರ. ಅವರೆಲ್ಲರಿಗೂ ಅಲ್ಲದಿದ್ದರೂ ಆಸಕ್ತರಿಗೆ ನೆನೆದಾಗ ಬೆರಳಂಚಿನಲ್ಲೇ ಒಂದೇ ಕಡೆ ಕೈಗೆಟಕುವ ಹಾಗೆ ಮಾಡುವ ನಿಟ್ಟಿನಲ್ಲಿ ನಮ್ಮ ಸುಗಮ ಕನ್ನಡ.ಕಾಂ ಅಂತರ್ಜಾಲ ಕ್ಷೇತ್ರದಲ್ಲಿ ಸುಪ್ರಸಿದ್ಧ ಶರಣರ ವಚನಗಳು, ದಾಸರ ಪದಗಳು, ಕಗ್ಗ, ತ್ರಿಪದಿಗಳು ಹೀಗೆ ಇನ್ನೂ ಅನೇಕ ರಚನೆಗಳನ್ನು ಸಂಗ್ರಹ ಮಾಡುವ ಯೋಜನೆಯನ್ನು ಹಮ್ಮಿಕೊಂಡಿದೆ. ಇದಕ್ಕೆ ತಮ್ಮಗಳ ಸಹಾಯ ಬೇಕಾಗಿದೆ. ತಮಗೆ ಕನ್ನಡ ಬೆರಳಚ್ಚು ಮಾಡಲು ಸಾಧ್ಯವಿದ್ದಲ್ಲಿ, ಈ ಕಲಸ ಆದಂತೇ ಎಂದುಕೊಳ್ಳಿ. ಪ್ರತಿ ವಿಭಾಗದಲ್ಲೂ ಸಾವಿರಕ್ಕೂ ಮೀರುವಂತೆ ಕೃತಿಗಳ ಕಲೆ ಹಾಕುವ ಯೋಚನೆ ಇದೆ. ಈ ಕೆಲಸಕ್ಕೆ ಗರಿಷ್ಟ ಮಿತಿಯಿಲ್ಲದಂತೆ ಹೆಗಲುಕೊಟ್ಟು ನೀವು ಸಹಾಯ ನೀಡಬಹುದು.ನಿಮ್ಮಲ್ಲಿ ಹೆಚ್ಚಿನ ಕನ್ನಡ ಅಭಿಮಾನವಿದ್ದಷ್ಟೂ ಹೆಚ್ಚಿನ ಸಹಾಯ ಸಾಧ್ಯವೆಂಬ ನಂಬಿಕೆ ನಮ್ಮದು. ೩೧ ಆಗಸ್ಟ್ ೨೦೧೫ ರೊಳಗೆ ಈ ಕಾಯಕ ಮುಗಿಸಿ, ಆಸಕ್ತರಿಗೆ ಲಭ್ಯವಾಗಿಸುವ ಆಸೆ ನಮ್ಮದು.

ಸಿಡ್ನಿ ಕನ್ನಡ ಶಾಲೆಯಿಂದ ಈಗಾಗಲೇ ಉತ್ತೀರ್ಣರಾದ ಮಕ್ಕಳೂ, ಸಿಡ್ನಿ ಕನ್ನಡ ಶಾಲೆಯ ಶಿಕ್ಷಕರೂ, ಆಸ್ಟ್ರೇಲಿಯಾದಲ್ಲಿ ಈಗಾಗಲೇ ಕನ್ನಡ ಟೈಪಿಂಗ್ ಮಾಡಲು ಕಲಿತವರೂ,ಪ್ರಪಂಚದ ನಾನಾ ಕಡೆಯಿಂದ ಹೊರನಾಡ ಚಲುಮೆಯ ಓದುಗರೂ, ಬರಹಗಾರರೂ ಸಹ ತಮ್ಮ ಕೈ ಜೋಡಿಸಿದ್ದಾರೆ.

**ಸಹಾಯ ಹೇಗೆ?**

೧.ಮೊದಲು ಆಸಕ್ತರು ಈ-ಮೈಲ್ ಮೂಲಕ ತಮ್ಮ ಹೆಸರು ನೊಂದಾಯಿಸಿಕೊಳ್ಳುವುದು.

೨.ಸುಪ್ರಸಿದ್ಧ ರಚನಕಾರರ ವಚನ, ದಾಸರ ಪದಗಳು, ಕಗ್ಗ, ತ್ರಿಪದಿಗಳು ಇವುಗಳಲ್ಲಿ ಸುಮಾರು ನಾಲ್ಕೈದು ಪುಟಗಳಷ್ಟು ತಮಗೆ ಈ-ಮೈಲ್ ಮೂಲಕ ಕಳುಹಿಸಿಕೊದಲಾಗುವುದು.

೩.ಅದನ್ನು ತಾವು ಬರಹ-ಯೂನಿಕೋಡ್ ಅಥವಾ ಗೂಗಲ್ ಸಹಾಯದಿಂದ ಟೈಪ್ ಮಾಡಿ ನಮಗೆ ಕಳುಹಿಸುವುದು.

೪.ಅವುಗಳನ್ನು ವೆಬ್ ಸೈಟ್ ನಲ್ಲಿ ಪ್ರಕಟಿಸಿದ ನಂತರ ಸಹಾಯ ಮಾಡಿದ ಎಲ್ಲರ ಹೆಸರುನ್ನೂ ಶಾಶ್ವತವಾಗಿ ಮುದ್ರಿಸಲಾಗುವುದು. ಅತಿ ಹೆಚ್ಚು ನೆರವು ನೀಡಿದವರಿಗೆ ಕನ್ನಡ ಶಾಲೆಯ ಕಡೆಯಿಂದ ಉಡುಗೊರೆ ಖಚಿತ.

**ನೊಂದಾಯಿಸಲು ಮಿಂಚಂಚೆ ವಿಳಾಸ - sugamakannada@gmail.com**

# ಏಳು ಬಣ್ಣ ಸೇರಿ ಬಿಳಿಯ ಬಣ್ಣವಾಯಿತು



ಸಂಕಲನ: ಬದರಿ ತ್ಯಾಮಗೊಂಡ್ಲು

**ಬೇಕಾಗುವ ಸಾಮಗ್ರಿ:**



- ರಬ್ಬರ್ ತಲೆ ಇರುವ ಒಂದು ಪುಟಾಣಿ ಪೆನ್ಸಿಲ್ (೧-೨ ಇಂಚ್ ಉದ್ದದ್ದು)
- ಒಂದು ಅಗಲ-ತಲೆ ಇರುವ ಪುಶ್ ಪಿನ್
- ಬಿಳಿಯ ಮೇಲ್ ಮೈ ಇರುವ ವೃತ್ತಾಕಾರದ ಕಾರ್ಡ್ ಬೋರ್ಡ್
- ಕಾಮನ ಬಿಲ್ಲಿನ ಬಣ್ಣಗಳ ಕ್ರಯಾನ್/ಸ್ಕೆಚ್ ಪೆನ್

**ವಿಧಾನ:**

- ವೃತ್ತಾಕಾರದ ಕಾರ್ಡ್ಬೋರ್ಡ್ ಮೇಲೆ ೭ ಸಮಭಾಗ ಮಾಡಿ VIBGYOR ಮಾದರಿಯಲ್ಲಿ ಬಣ್ಣ ತುಂಬಿ
    - (VIOLET, INDIGO, BLUE, GREEN, YELLOW, ORANGE, RED)
- ಕಲರ್ ಮಾಡಿದ ಕಾರ್ಡ್ಬೋರ್ಡ್ ಅನ್ನು ಬಣ್ಣ ಮೇಲ್ಮುಖವಾಗಿ ತೋರುವಂತೆ ಪೆನ್ಸಿಲ್ ತಲೆಯಲ್ಲಿರುವ ರಬ್ಬರಿಗೆ ಪುಶ್ ಪಿನ್ ಸಹಾಯದಿಂದ ಚುಚ್ಚಿ ಭದ್ರಗೊಳಿಸಿ




- ಬುಗುರಿ ಆಡಿಸುವಂತೆ ಪೆನ್ಸಿಲ್ ಅನ್ನು ನೆಲದ ಮೇಲೆ ತಿರುಗಿಸಿ.
    - (ಬಿಳಿಯ ಬಣ್ಣ ಬರುವ ತನಕ ಜೋರಾಗಿ ತಿರುಗುವಂತೆ ಮಾಡಬೇಕಾಗಬಹುದು)
    - ಉಪಯೋಗಿಸಿದ ಬಣ್ಣದ ಗುಣಮಟ್ಟದಮೇಲೆ ಎಷ್ಟು ಬಿಳಿಯಾದ ಬಣ್ಣ ಬರುವುದು ಎಂದು ನಿರ್ಧಾರವಾಗುತ್ತದೆ
- ಆಟಿಕೆಯ ಮೋಟಾರ್ ಇದ್ದರೆ, ಬಣ್ಣದ ಕಾರ್ಡ್ಬೋರ್ಡ್ ಅನ್ನು ಅದಕ್ಕೆ ಜೋಡಿಸಿದರೆ, ಈ ಪ್ರಯೋಗವು ಬಹಳ ಸುಲಭ

**ಏನಾಗುತ್ತಿದೆ:**

ನಮ್ಮ ಕಣ್ಣುಗಳಲ್ಲಿ ರಾಡ್ಗಳು ಮತ್ತು ಕೋನ್ಗಳು ಎಂಬ ಬೆಳಕಿನ ಸೂಕ್ಷ್ಮ ದ್ಯುತಿ-ಗ್ರಾಹಕ ಜೀವಕೋಶಗಳು ಇರುತ್ತವೆ. ಇವುಗಳು ವಸ್ತುಗಳಿಂದ ಪ್ರತಿಫಲನಗೊಂಡ ಬೆಳಕಿನ ತರಂಗಗಳನ್ನು ಗ್ರಾಹಿಸಿ ಮೆದುಳಿಗೆ ಸಂಕೇತವನ್ನು ಕಳುಹಿಸುತ್ತವೆ. ಬೆಳಕಿನ ಕಿರಣ ಪ್ರತಿಫಲಿಸದೆ ಎಲ್ಲವೂ ಹೀರಿಕೊಂಡಿದ್ದರೆ ಅದು ಕಪ್ಪು ಬಣ್ಣವೆಂದೂ, ಒಂದಿಷ್ಟೂ ಹೀರದಿದ್ದರೆ ಸಂಪೂರ್ಣ ಬಿಳುಪೆಂದೂ ಅವುಗಳು ಗ್ರಾಹಿಸುತ್ತವೆ.

ಕಾರ್ಡ್ಬೋರ್ಡ್ ನಲ್ಲಿರುವ ಬಣ್ಣದ ಚಕ್ರವು ವೇಗವಾಗಿ ತಿರುಗುವಾಗ ಪ್ರತಿಯೊಂದು ಬಣ್ಣವೂ ಬೇಗ ಬೇಗನೆ ಬದಲಾಗುವುದರಿಂದ ಮೆದುಳಿಗೆ ಸಂವಹನ ಮಾಡುವುದು ದುಸ್ತರವಾಗುತ್ತದೆ. ಹೀಗಾಗಿ ಎಲ್ಲ ಬಣ್ಣವೂ ಕಲೆತಂತೆ ಭಾಸವಾಗಿ, ಏನೂ ಹೀರಿಕೊಂಡೇಯಿಲ್ಲವೆನ್ನುವ ಸೂಚನೆ ಸಿಗುವುದರಿಂದ ಬಿಳಿಯ ಬಣ್ಣದಂತೆ ಭಾಸವಾಗುತ್ತದೆ. ▪

# ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

**Festival of Chariots(ratha yatra)**

Sat, 16 May, 11:00 – 17:00

Prince Alfred square, Parramatta
(corner of Market St. and Church St.)

On behalf of ISKCON Sydney, Hare Krishna Temple, everyone is cordially invited to come and participate in the Second Annual Rathayatra (Festival of Chariots) in Parramatta.
Details Somendra 0433 242 148

**Badminton Australia**

Tue, 26 May, 11:00 – 17:00
at Sydney Olympic Park
Badminton Australia is calling fans of the sport to come and take part in an exciting opportunity - the chance to be courtside with the international starts of badminton.

ಈ ಸಂಚಿಕೆಯನ್ನು ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ

ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ

ಸಲಹಾ ಸಮಿತಿ -ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.
ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.